# ಅಧ್ಯಯನ – 4 Study - IV

# 'ಪವಿತ್ರಾಲಯದ ಶುದ್ಧೀಕರಣ'

**2300 ದಿನಗಳು – ದಾನಿಯೇಲ 8 : 10–26**

# The Cleansing of the Sanctuary

**2300 Days - Dan. 8 : 10-26**

**ನಿಜವಾದ ಪವಿತ್ರಾಲಯ. ಮಲಿನಗೊಳಿಸುವಿಕೆ. ತಳ ಅಥವಾ ಅಸ್ತಿವಾರ. "ಯಾವ ರೀತಿ ಕೆಡವಲ್ಪಟ್ಟಿತ್ತು". ಈ ಬಗ್ಗೆ ರೋಮನ್ ಕೈಥೋಲಿಕ್ ಬರಹಗಳ ಪುರಾವೆಗಳು. ದರ್ಶನದ ನಂತರ 2300 ವರ್ಷಗಳವರೆಗೆ ಶುದ್ಧೀಕರಣವು ಯಶಸ್ವಿಯಾಗುವುದಿಲ್ಲ. ಹೇಗೆ ಮತ್ತು ಎಲ್ಲಿ ಪ್ರಾರಂಭವಾಯಿತು, ಮತ್ತು ಇದರ ಮುಕ್ತಾಯ ಯಾವಾಗ ಯುಕ್ತವಾಗಿದೆ? "ಬಂಗಾರದ ಪಾತ್ರೆಗಳು" ಸತ್ಯಗಳು ಬದಲಾಯಿಸಲೇ ಬೇಕು.**

ಹಿಂದಿನ ಅಧ್ಯಾಯಗಳಲ್ಲಿ ನಾವು ದಾನಿಯೇಲ 7:8, 11,20–26 ಇವುಗಳಲ್ಲಿ ಕೊಟ್ಟಿರುವ ಅನುಮಾನಾಸ್ಪದ ದುರಹಂಕಾರದ ಮತ್ತು ವಿಲಕ್ಷಣವಾದ ಚಿಕ್ಕ ಕೊಂಬಿನೊಂದಿಗೆ 2 ಥೆಸಲೋನಿಕ 2:3ರಲ್ಲಿನ ಅಧರ್ಮ ಸ್ವರೂಪಿಯ ಮತ್ತು ಮತ್ತಾಯ 24:15ರಲ್ಲಿ ಕರ್ತನು ಮುಂತಿಳಿಸಿದಂತೆ ಹಾಳುಮಾಡುವ ಅಸಹ್ಯವಸ್ತುವಿನ ಪ್ರತಿಷ್ಠೆಯೊಂದಿಗಿನ ಅನನ್ಯತೆಯ ಬಗ್ಗೆ ನೋಡಿದೆವು. ಮಾತ್ರವಲ್ಲದೆ ಅದೇ ಪೋಪನ ಅಧಿಕಾರವು ದಾನಿಯೇಲ 8:9,10, 23–25ರಲ್ಲಿ ಉಲ್ಲೇಖಿಸಲ್ಪಟ್ಟಿದೆ. ನಮ್ಮ ಪ್ರಸ್ತುತ ಉದ್ದೇಶಗಳಿಗಾಗಿ ಮತ್ತು ಮಿತಿಯುಳ್ಳ ಸ್ಥಳಾವಕಾಶದ ಪ್ರಯುಕ್ತ, ಅದರ ಏರುವಿಕೆ, ಅದರ ಗುಣಲಕ್ಷಣ, ತುಳಿದುಹಾಕುವ ಅದರ ಶಕ್ತಿಯನ್ನು ಒಡೆದುಹಾಕುವುದು ಮತ್ತು ಇನ್ನೂ ಭವಿಷ್ಯದಲ್ಲಿರುವ ಅದರ ಅಂತಿಮವಾದ ಸಂಪೂರ್ಣನಾಶನ ಇವುಗಳ ಬಗ್ಗೆ ನಾವು ಸಾಕಷ್ಟು ಪರೀಕ್ಷಿಸಿದ್ದೇವೆ.

ನಾವೀಗ ಮತ್ತೊಂದು ಪ್ರವಾದನೆಯನ್ನು ಪರೀಕ್ಷೆಮಾಡಬಯಸಿದ್ದೇವೆ. ಅದು ಒಂದು ವಿಶೇಷವಾದ ತಪ್ಪು ಸಿದ್ಧಾಂತವನ್ನು ಅಥವಾ ಮೂಲಭೂತವಾದ ತಪ್ಪನ್ನು ನಿರ್ದಿಷ್ಟವಾಗಿ ಸೂಚಿಸುತ್ತದೆ. ಅದು ಆ ಪದ್ಧತಿಗೆ ನಮ್ಮ ಕರ್ತನ ಸಂಪೂರ್ಣ ನಿರಾಕರಣೆಗೆ ನಿರ್ದೇಶಿಸುತ್ತದೆ ಮತ್ತು ಆತನ ದೃಷ್ಟಿಯಲ್ಲಿ ಅದು ಹಾಳುಮಾಡುವ ಅಸಹ್ಯತೆಯನ್ನುಂಟು ಮಾಡುವುದಾಗಿದೆ. ಈಗ ಪರಿಗಣಿಸುತ್ತಿರುವ ಪ್ರವಾದನೆಯು ಮುಂದೆ ಸತ್ಯ ಸಭೆಯು, ಪ್ರತಿಷ್ಠೆಗೊಂಡ ವರ್ಗವು, ಪವಿತ್ರಾಲಯವು ಯಾವ ಸಮಯದಲ್ಲಿ ಪೋಪನ ಅಧಿಕಾರವು ಪರಿಚಯಿಸಿರುವ ಈ ಹಾಳುಮಾಡುವ ಅಸಹ್ಯಕರವಾದ ಸಂಗತಿಗಳಿಂದ ಶುದ್ಧೀಕರಿಸಲ್ಪಡುತ್ತದೆ ಎಂಬುದನ್ನು ತೋರಿಸುತ್ತದೆ.

ಹಿಂದಿನ ಅಧ್ಯಾಯವು ನಮಗೆ ಕೆಲವೊಂದು ಕಾಯುವ ಸಮಯಗಳ ಬಗ್ಗೆ, ಪವಿತ್ರ ವರ್ಗವನ್ನು ಪವಿತ್ರೀಕರಿಸುವ ಬಗ್ಗೆ ಅಥವಾ ಪವಿತ್ರಾಲಯದ ವರ್ಗದ ಬಗ್ಗೆ ಸೂಚಿಸಿರುವಾಗ, ಈ ಪ್ರವಾದನೆಯು ಪವಿತ್ರ ವಿಶ್ವಾಸಿಗಳ ಕೇಂದ್ರ ಭಾಗವು ಪೋಪನ ಅಸಹ್ಯತನಗಳು, ತಪ್ಪುಗಳು ಇವುಗಳಿಂದ ಬಿಡುಗಡೆ ಹೊಂದುವ ದಿನವನ್ನು ಸೂಚಿಸುತ್ತದೆ. ಮತ್ತು ಅದರಲ್ಲಿ ದುರುಪಯೋಗ ಪಡಿಸಿಕೊಂಡ ಬಂಗಾರದ ಪಾತ್ರೆಗಳು ಅಥವಾ ಅಮೂಲ್ಯವಾದ ಸತ್ಯಗಳು ಪವಿತ್ರರಿಗೆ ಅಥವಾ ಪವಿತ್ರಾಲಯ ವರ್ಗದವರಿಗೆ ಪುನಃವಶಗೊಳ್ಳಲು ಪ್ರಾರಂಭಿಸುತ್ತವೆ.

ನಾವು ದಾನಿಯೇಲ 8:9–26ನ್ನು ಕೆಳಕಂಡಂತೆ ಉಲ್ಲೇಖಿಸುತ್ತೇವೆ :–

"ಒಂದು ಚಿಕ್ಕ ಕೊಂಬು ಮೊಳೆತು ಬಹು ದೊಡ್ಡದಾಗಿ ಬೆಳೆದು ತೆಂಕಣಲ್ಲಿಯೂ, ಮೂಡಣ ದಲ್ಲಿಯೂ, ಅಂದಚಂದದ ದೇಶದಲ್ಲಿಯೂ ಪ್ರಬಲವಾಯಿತು (ಸಂಪೂರ್ಣ ಸಭೆಯನ್ನು ನಿಯಂತ್ರಿಸಿತು). ಅದು ನಕ್ಷತ್ರಗಣಗಳ ಮೇಲೆ ಕೈಮಾಡುವಷ್ಟು ಹೆಚ್ಚಿ ಆ ಗಣದ ಕೆಲವು ನಕ್ಷತ್ರಗಳನ್ನು ನೆಲಕ್ಕೆ ಕೆಡವಿ ತುಳಿದುಬಿಟ್ಟಿತು. ಇದಲ್ಲದೆ ಆ ಗಣದ ಅಧಿಪತಿಯನ್ನೂ ಎದುರಿಸುವಷ್ಟು ಉಬ್ಬಿಕೊಂಡು (ಮಾನ್ಯತೆ ಮತ್ತು ಘನತೆಯನ್ನು ತಾನೇ ವಹಿಸಿಕೊಂಡು, ಪ್ರವಾದನೆಗಳನ್ನು ಮತ್ತು ಬಿರುದುಗಳನ್ನು ತನಗೆ ಅನ್ವಯಿಸಿಕೊಂಡಿತು. ಅದು ನ್ಯಾಯವಾಗಿ ನಿಜವಾದ ಮುಖ್ಯಸ್ಥನೂ, ಅರಸನೂ, ಸಭೆಯ ತಲೆಯೂ ಆದ ಕ್ರಿಸ್ತನಿಗೆ ಸೇರಬೇಕಾದದ್ದು) ನಿತ್ಯಹೋಮವನ್ನು ಆತನಿಗೆ (ಕ್ರಿಸ್ತನಿಗೆ) ಸಲ್ಲದಂತೆ ಮಾಡಿ ಆತನ ಪವಿತ್ರಸ್ಥಾನವನ್ನು ಕೆಡವಿ ನಿತ್ಯಹೋಮವನ್ನು ಅಡಗಿಸುವುದಕ್ಕೆ ನೀಚತನದಿಂದ ಒಂದು ಸೈನ್ಯವನ್ನು (ಜನ ಸಮೂಹವನ್ನು) ಇಳಿಸಿ ಸತ್ಯಧರ್ಮವನ್ನು ನೆಲಕ್ಕೆ ದೊಬ್ಬಿ ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಂಡು ವೃದ್ಧಿಗೆ ಬಂತು".

"ಆಗ ಒಬ್ಬ ದೇವದೂತನು ಮಾತನಾಡುವುದನ್ನು ಕೇಳಿದೆನು; ಮಾತನಾಡುವವನನ್ನು ಮತ್ತೊಬ್ಬ ದೇವದೂತನು ಸಂಬೋಧಿಸಿ – ನಿತ್ಯಹೋಮವನ್ನು ನಿಲ್ಲಿಸುವುದು, ಭಯಂಕರವಾದ ದೇವದ್ರೋಹ ಮಾಡುವುದು, ಪವಿತ್ರಾಲಯವನ್ನೂ, ದೈವಭಕ್ತ ಗಣವನ್ನೂ ತುಳಿಯುವುದು ಎಂಬ ಕನಸಿನ ಕಾರ್ಯಗಳು ಎಷ್ಟು ಕಾಲ ನಡೆಯುವುವು? ಎಂದು ಪ್ರಶ್ನೆ ಮಾಡಲು ಅವನು ಇವನಿಗೆ – ಉದಯಾಸ್ತಮಾನಗಳು (ದಿನಗಳು) ಎರಡು ಸಾವಿರದ ಮುನ್ನೂರರವರೆಗೆ ನಡೆಯುವುವು; ಅನಂತರ ಪವಿತ್ರಾಲಯಕ್ಕೆ ಪುನಃ ನ್ಯಾಯಸ್ಥಾಪನೆಯಾಗುವುದು ಎಂದು ಹೇಳಿದನು.

'ದಾನಿಯೇಲನಾದ ನಾನು ಕನಸನ್ನು ಕಂಡು ಅದನ್ನು ಗ್ರಹಿಸಲು ಪ್ರಯತ್ನಿಸುತ್ತಿರುವಾಗ ಇಗೋ, ಮನುಷ್ಯ ಸದೃಶನೊಬ್ಬನು ನನ್ನೆದುರಿಗೆ ನಿಂತಿದ್ದನು. ಆಗ – ಗಬ್ರಿಯೇಲನೇ, ಕನಸಿನ ಅರ್ಥವನ್ನು ಇವನಿಗೆ ತಿಳಿಯಪಡಿಸು ಎಂದು ಮನುಷ್ಯ ಧ್ವನಿಯಂಥಹ ಒಂದು ವಾಣಿಯು ಊಲಾ ಕಾಲುವೆಗಳ (ನದಿಯ) ದಡಗಳ ನಡುವೆ ನನಗೆ ಕೇಳಿಸಿತು. ಅದರಂತೆ ಅವನು ನನ್ನ ಬಳಿಗೆ ಬಂದನು; ಅವನು ಬರಲು ನಾನು ಭಯಭ್ರಾಂತನಾಗಿ ಅಡ್ಡಬಿದ್ದೆನು; ನನಗೆ ಅವನು – "ನರಪುತ್ರನೇ ಇದು ಮನದಟ್ಟಾಗಿರಲಿ, ಇದು ಅಂತ್ಯಕಾಲದಲ್ಲಿ ನೆರವೇರುವ ಕನಸು ಎಂದು ಹೇಳಿದನು". ಅವನು ನನ್ನೊಡನೆ ಮಾತನಾಡುತ್ತಿರುವಲ್ಲಿ ನಾನು ಮೈಮರೆತು ಅಡಿಮೊಗವಾಗಿ ಬಿದ್ದಿದ್ದೆನು; ಆಗ ಅವನು ನನ್ನನ್ನು ಮುಟ್ಟಿ ನಿಲ್ಲಿಸಿ ನನಗೆ – ಇಗೋ, ದೇವರು ತನ್ನ ಕೋಪವನ್ನು ತೀರಿಸುವ ಮುಂದಿನ ಕಾಲದಲ್ಲಿ ನಡೆಯತಕ್ಕದ್ದನ್ನು ನಿನಗೆ ತಿಳಿಸುವೆನು; ಅದು ಕ್ಲುಪ್ತವಾದ ಅಂತ್ಯಕಾಲದ್ದೇ ಎಂದು ಹೇಳಿದನು.

"ನೀನು ನೋಡಿದ ಎರಡು ಕೊಂಬಿನ ಟಗರು ಮೇದ್ಯಯ ಮತ್ತು ಪಾರಸಿಯ ರಾಜರನ್ನು ಪ್ರತಿನಿಧಿಸುತ್ತದೆ. (ಒರಟು ಕೂದಲಿನ) ಆ ಹೋತವು ಗ್ರೀಕ್ ರಾಜ್ಯ, ಅದರ ಕಣ್ಣುಗಳ ನಡುವಣ ದೊಡ್ಡ ಕೊಂಬು ಆ ರಾಜ್ಯದ ಮೊದಲನೆಯ ರಾಜ. ಆ ಮುರಿದ ಮೇಲೆ ಅದರ ಸ್ಥಾನದಲ್ಲಿ ನಾಲ್ಕು ಕೊಂಬುಗಳು ಎದ್ದ ವಿಷಯವೇನೆಂದರೆ, ಆ ಜನಾಂಗದೊಳಗಿಂದ ನಾಲ್ಕು ರಾಜ್ಯಗಳು ಏಳುವುದನ್ನು ಸೂಚಿಸುತ್ತದೆ; ಆದರೆ ಮೊದಲನೆಯ ರಾಜನಿಗೆ ಇದ್ದಷ್ಟು ಶಕ್ತಿಯು ಅವುಗಳಿಗೆ ಇರುವುದಿಲ್ಲ. ಆ ರಾಜ್ಯಗಳ ಕಡೆಯ ಕಾಲದಲ್ಲಿ, ಅಧರ್ಮಿಗಳ ಅಧರ್ಮವು ಪೂರ್ತಿಯಾದಾಗ (ಹೋಲಿಸಿ ಆದಿ. 15:16) ಕಠಿಣಮುಖನೂ, ದ್ವಂದ್ವಾರ್ಥವಚನ (ನಾಚಿಕೆಯಿಲ್ಲದ) ನಿಪುಣನೂ ಆದ ಒಬ್ಬ ರಾಜನು (ಪೋಪನು) ತಲೆದೂರುವನು. ಅವನು ಪಬಲನಾಗುವನು, ಆದರೆ ಬಲದಿಂದಲ್ಲ; (ಪೋಪನ ಅಧಿಕಾರವು ಯೂರೋಪಿನ ವಿವಿಧ ದೇಶಗಳ ಸೇನಾಪಡೆಗಳನ್ನು ಉಪಯೋಗಿಸಿಕೊಂಡು ಬಲ ಗೊಳ್ಳುವುದು) ಅತ್ಯಧಿಕವಾಗಿ ಹಾಳುಮಾಡಿ (ಭ್ರಷ್ಟಗೊಳಿಸಿ) ವೃದ್ಧಿಗೆ ಬಂದು ಇಷ್ಟಾರ್ಥವನ್ನು ತೀರಿಸಿಕೊಳ್ಳುವನು; ಬಲಿಷ್ಟರನ್ನೂ ದೇವಜನರನ್ನೂ ಧ್ವಂಸಮಾಡುವನು. ಯುಕ್ತಿಯಿಂದಲೇ ತನ್ನ ಮೋಸವನ್ನು ಸಿದ್ಧಿಗೆ ತಂದು ಮನದಲ್ಲಿ ಉಬ್ಬಿಕೊಂಡು ನೆಮ್ಮದಿಯಾಗಿರುವ ಬಹು ಜನರನ್ನು ನಾಶಪಡಿಸಿ ಪ್ರಭುಗಳ ಪ್ರಭುವಿಗೂ ವಿರುದ್ಧವಾಗಿ (ಕ್ರಿಸ್ತ ವಿರೋಧಿಯಾಗಿ) ಏಳುವನು. ಆಹಾ, ಯಾರ ಕೈಯೂ ಸೋಕದೆ ಹಾಳಾಗುವನು. ಕನಸಿನಲ್ಲಿ ತಿಳಿಸಲ್ಪಟ್ಟ ಉದಯಾಸ್ತಮಾನಗಳ (ಶುದ್ಧೀಕರಿಸುವವರೆಗೆ 2300 ಇರುತ್ತವೆ) ವಿಷಯವು (ಆ ಭಾಗದ) ನಿಜವೇ ಸರಿ; ಆದರೆ, ಆ ಕನಸು ಗುಟ್ಟಾಗಿರಲಿ; ಅದು ಬಲು ದೂರದ ಕಾಲದ್ದು ಎಂದನು".

ನಾವು ಇವುಗಳಲ್ಲಿಯೂ, ಮುಂಚಿನ ವಾಕ್ಯಗಳಲ್ಲಿ ಪ್ರಸ್ತಾಪಿಸಿರುವ ಟಗರು, ಮೇಕೆ, ಕೊಂಬುಗಳು ಮುಂತಾದವುಗಳ ಬಗ್ಗೆ ವಿಸ್ತಾರವಾದ ವಿವರಣೆಗಳನ್ನು ನೀಡುವುದಿಲ್ಲ. ಈಗಾಗಲೇ ಅವುಗಳನ್ನು ಸ್ಪಷ್ಟಪಡಿಸಲಾಗಿದೆ ಎಂದು ನಂಬಿದ್ದೇವೆ. (ಎರಡನೇ ಅಧ್ಯಾಯದ 27ನೇ ಪುಟ ನೋಡಿ). ನಾವೀಗಾಗಲೇ (ಏಳನೇ ಅಧ್ಯಾಯದಲ್ಲಿ) ಅದನ್ನು ಸ್ವಂತ ಕೊಂಬುಗಳುಳ್ಳ ಪ್ರತ್ಯೇಕವಾದ ಕಾಡುಮೃಗದಂತೆ ಮತ್ತು ಅದರ ಕಾಲುಗಳು ಮತ್ತು ಪಾದಗಳ ಬಗ್ಗೆ ಎರಡನೇ ಅಧ್ಯಾಯದಲ್ಲಿ ಬರುವ ರೋಮನ್ನು ನೋಡಿದ್ದೇವೆ. ಇಲ್ಲಿ (viiiನೇ ಅಧ್ಯಾಯದಲ್ಲಿ) ಇದನ್ನು ಗ್ರೇಷಿಯನ್ ಆಡಿನ ಕೊಂಬುಗಳಂತೆ ನಡಿಸಿಕೊಳ್ಳಲಾಗುವುದು. ಇದು ದಕ್ಷಿಣದ ಕಡೆಗೆ, ಪೂರ್ವದ ಕಡೆಗೆ ನಾಗರೀಕ ಅಥವಾ ಸಾರ್ವಭೌಮಿಕ ರೋಮಿನಂತೆ ದೊಡ್ಡದಾದಮೇಲೆ ಬದಲಾವಣೆ ಹೊಂದಿ ಪೋಪನ ರೋಮ್ ಆಗುತ್ತದೆ. "ಅದು ಪರಲೋಕ ಸಮೂಹಕ್ಕಿಂತಲೂ ದೊಡ್ಡದಾಗುತ್ತದೆ" ಮುಂತಾದವುಗಳು. ಅದು ಜನಸಮೂಹದ ಮೇಲೆ ಧರ್ಮೋಪದೇಶಕರ ಶಕ್ತಿ ಅಥವಾ ಸಾಮ್ರಾಜ್ಯದಂತಾಗುತ್ತದೆ. ರೋಮನ್ ಚಕ್ರಾಧಿಪತ್ಯವನ್ನು ಗ್ರೇಷಿಯನ್ ಚಕ್ರಾಧಿಪತ್ಯದ ಒಂದು ಭಾಗವನ್ನಾಗಿ ಅಥವಾ ವರ್ಧನೆಯಾಗಿ ನಡೆಸಿಕೊಳ್ಳುವ ಇದೇ ರೀತಿಯು ಅಧ್ಯಾಯ xi ರ ಚಾರಿತ್ರಿಕ ಪ್ರವಾದನೆಯಲ್ಲಿ ಅನುಸರಿಸಲಾಗಿದೆ.

ಇಲ್ಲಿ ತಿಳಿಸಿರುವ ನಿತ್ಯ ಹೋಮಗಳು ಸಾಮಾನ್ಯವಾಗಿ ಯೆಹೂದ್ಯರು ಯೆರೂಸಲೇಮಿನಲ್ಲಿ ಮಾಡುವ ಪ್ರತಿನಿತ್ಯದ ಅಥವಾ ನಿರಂತರವಾದ ಅಗ್ನಿಹೋಮಗಳನ್ನು ಉಲ್ಲೇಖಿಸುವುದಾಗಿದೆ. ನಿರಂತರವಾದ ಹೋಮಗಳನ್ನು ತೆಗೆದುಹಾಕುವುದನ್ನು ಈಗಾಗಲೇ ಹೇಳಿರುವಂತೆ Antiochus Epiphanes ಎಂಬಾತನಿಗೆ ವಹಿಸಲಾಗಿದೆ. ಪ್ರವಾದನೆಯು ಹೇಗೂ ಸಾಂಕೇತಿಕ ದೇವಾಲಯ ಅಥವಾ ಪವಿತ್ರಾಲಯದ ಮೂಲಕ ಹಾದುಹೋಗುವುದಾಗಿದೆ ಮತ್ತು ಸಾಂಕೇತಿಕ ಅಗ್ನಿಹೋಮಗಳು, ದೇವಾಲಯದ ಪ್ರತಿಸಂಕೇತ ಪವಿತ್ರಾಲಯದಲ್ಲಿ, ಕ್ರೈಸ್ತ ದೇವಾಲಯದಲ್ಲಿ (2 ಕೊರಿಂಥ 6:16) ನಡಿಸಿಕೊಳ್ಳಲಾಗುವುದು ಮತ್ತು ಪ್ರತಿಸಂಕೇತಿಕ ಅಗ್ನಿಹೋಮದೊಂದಿಗೆ, ಕ್ರಿಸ್ತನು ನಿತ್ಯನಿರಂತರಕ್ಕೂ ಸಮಸ್ತ ಲೋಕದ ಪಾಪ ನಿವಾರಣಾರ್ಥ ಅರ್ಪಿಸಿದ ಆ ಯೋಗ್ಯವಾದ ಸಮರ್ಪಣೆಯು, ಸರ್ವಕಾಲಕ್ಕೂ ಫಲದಾಯಕವಾಗುವುದು.

ಕ್ರಿಸ್ತನ ನಿರಂತರವಾದ ಹೋಮವು ನಿಜವಾಗಿಯೂ ರದ್ದಾಗಿಲ್ಲ ಅಥವಾ ಪೋಪನ ಅಧಿಕಾರದಿಂದ ತೆಗೆದುಹಾಕಲ್ಪಡಲಿಲ್ಲ, ಆದರೆ ಅದು ಆ ಪದ್ಧತಿಯಿಂದ ಮುಂದುವರೆದ ತಪ್ಪುಸಿದ್ಧಾಂತದ ಸಲುವಾಗಿ ಪಕ್ಕಕ್ಕೆ ಸರಿಸಲ್ಪಟ್ಟಿತು, ಅದು ಕ್ರಮೇಣವಾಗಿ, ಆದರೆ ಅಂತ್ಯದಲ್ಲಿ ಪೂರ್ಣವಾಗಿ ನಿರಂತರವೂ, ಫಲದಾಯಕವೂ ಆದ ಕ್ರಿಸ್ತನ ಸಮರ್ಪಣೆಯ ಅರ್ಹತೆಯನ್ನೇ ಬದಿಗೆ ಸರಿಸಿತು. ಈ ತಪ್ಪು ಸಿದ್ಧಾಂತವನ್ನು 'Mass' ಅಥವಾ 'Sacrifice of Mass' ಎಂದು ಕರೆಯಲಾಗುತ್ತದೆ.

ಪ್ರೊತಸ್ತಾಂತರು ಸಾಮಾನ್ಯವಾಗಿ ಹೀಗೆಂದು ಕರೆಯಲ್ಪಡುವ ಸಂಸ್ಕಾರದ ಬಗ್ಗೆ ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ಅವರು ಅದು ಕರ್ತನ ರಾತ್ರಿ ಭೋಜನವನ್ನು ರೋಮನ್ ಕೈಥೋಲಿಕರು ಆಚರಿಸುವ ಬೇರೆ ವಿಧವಾದ ರೂಪ ಎಂದು ಭಾವಿಸುತ್ತಾರೆ. ಇತರರು ಅದು ಒಂದು ವಿಧವಾದ ವಿಶೇಷ ಪ್ರಾರ್ಥನೆ ಎಂಬ ಆಲೋಚನೆ ಹೊಂದಿಕೊಳ್ಳುತ್ತಾರೆ. ಆದರೆ ಈ ಎಲ್ಲಾ ಆಲೋಚನೆಗಳೂ ತಪ್ಪಾದವುಗಳು. ಮಾಸ್ ಬಗ್ಗೆ ರೋಮನ್ ಕೈಥೋಲಿಕರ ಸಿದ್ಧಾಂತವು ಏನೆಂದರೆ – ಕರ್ತನ ಮರಣವು ಆದಾಮನ ಅಥವಾ ಮೂಲ ಪಾಪವನ್ನು ರದ್ದುಗೊಳಿಸಿದೆ, ಆದರೆ ಅದು ನಮ್ಮ ದಿನನಿತ್ಯದ ಕುಂದುಕೊರತೆಗಳು ಮತ್ತು ಬಲ ಹೀನತೆಗಳಿಗೆ, ಪಾಪಗಳಿಗೆ ಮತ್ತು ಲೋಪಗಳಿಗೆ ಅನ್ವಯವಾಗುವುದಿಲ್ಲ, ಅದು ನಮ್ಮ ಎಲ್ಲಾ ಪಾಪಗಳಿಗೆ ಸದಾ ಯೋಗ್ಯವಾದ ನಿತ್ಯನಿರಂತರವಾದ ಹೋಮವಲ್ಲ. ಸದಾಕಾಲಕ್ಕೆ ಪ್ರತಿಯೊಬ್ಬ ಪಾಪಿಯನ್ನು ಆತನು ದೇವರೊಡನೆ ಅನ್ಯೋನ್ಯತೆ ಮತ್ತು ಸಾಂಗತ್ಯಕ್ಕೆ ಹಿಂತಿರುಗುವಂತೆ ಮಾಡಲು ಆತನನ್ನು ಆವರಿಸುವ ಫಲೋತ್ಪಾದಕವಾದ ನಿಲುವಂಗಿಯೂ (ವಸ್ತ್ರವೂ ಅಲ್ಲ) ಎಂಬುದೇ. ಇಂಥಾಃ ಪಾಪಗಳಿಗಾಗಿಯೇ 'Sacrifice of Mass'ನ್ನು ಸ್ಥಾಪಿಸಲಾಗಿದೆ. ಪೋಪನ ಅನುಯಾಯಿಗಳಿಂದ ಇದು ಕಲ್ವಾರಿ ಸಮರ್ಪಣೆಯ ಮುಂದಿನ ಅಭಿವೃದ್ಧಿಯಾಗಿದೆ ಎಂದು ಪರಿಗಣಿಸ ಲಾಗಿದೆ, ಪ್ರತಿಯೊಂದು ಬಾರಿಯೂ ಈ ಸಮರ್ಪಣೆಯನ್ನು ಅರ್ಪಿಸುವಾಗ, ಕ್ರಿಸ್ತನ ನೂತನ ಸಮರ್ಪಣೆಯು ಆ ನಿರ್ದಿಷ್ಟ ವ್ಯಕ್ತಿಗಾಗಿ ಆತನ ಪಾಪಗಳ ಪರಿಹಾರಾರ್ಥವಾಗಿ ನಡಿಸಲಾಗುವುದು ಮತ್ತು ಪಾದ್ರಿಯು ಅದನ್ನು ಅರ್ಪಿಸುವಾಗ ಮಾನಸಿಕವಾಗಿ ಇದು ಅನ್ವಯವಾಗುತ್ತದೆ ಎಂದು ಅವರು ಪರಿಗಣಿಸುತ್ತಾರೆ.

ಆ ರೀತಿಯಾಗಿ ಕ್ರಿಸ್ತನು ಹೊಸದಾಗಿ ಸಮರ್ಪಣೆ ಗೊಳ್ಳುವುದನ್ನು ಗೋಧಿಯ ರೊಟ್ಟಿಯ ಮೂಲಕ ಮತ್ತು ದ್ರಾಕ್ಷಾರಸದ ಮೂಲಕ ಅಧಿಕೃತ ಪಾದ್ರಿಯಿಂದ ಮೊದಲಿಗೆ ಪ್ರಾರಂಭವಾಯಿತು. ಅವುಗಳು ಬಲಿಪೀಠದ ಮೇಲೆ ಇಡಲ್ಪಡುವವರೆಗೂ ಸಾಧಾರಣ ರೊಟ್ಟಿ ಮತ್ತು ದ್ರಾಕ್ಷಾರಸಗಳು, ಯಾವಾಗ ಸಂಪ್ರೋಕ್ಷಣಾ ನುಡಿಗಳು ಪಾದ್ರಿಯಿಂದ ನುಡಿಯಲ್ಪಡುತ್ತದೋ ಆಗ ಅದು ಕ್ರಿಸ್ತನ ನಿಜವಾದ ದೇಹ ರಕ್ತಗಳಾಗುತ್ತವೆಂದು ಅವರು ಹಕ್ಕಿನಿಂದ ಹೇಳುತ್ತಾರೆ. ಆಗ ಹಾಗೆ ಕಂಡು ಬರುವದಾದರೂ, ಅವುಗಳು ರೊಟ್ಟಿ, ದ್ರಾಕ್ಷಾರಸಗಳಾಗಿರುವುದಿಲ್ಲ. ಈ ಬದಲಾವಣೆಗೆ 'Transubstantiation' ಅಂದರೆ, ವಸ್ತುಗಳ ಮಾರ್ಪಡುವಿಕೆ ಎನ್ನುತ್ತಾರೆ. ಈ ರೀತಿಯಾಗಿ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಕ್ರಿಸ್ತನ ನಿಜವಾದ ಮಾಂಸ ಮತ್ತು ರಕ್ತವನ್ನಾಗಿ ಪರಿವರ್ತಿಸುವುದಕ್ಕೆ ಐದು ಮಾಂತ್ರಿಕವಾದ ಲ್ಯಾಟಿನ್ ಪದಗಳನ್ನು ಹಕ್ಕಿನಿಂದ ಬಳಸುತ್ತಾರೆ. ಅವುಗಳೆಂದರೆ: Hoc, est, autem, corpus ಮತ್ತು meum ಎಂಬವುಗಳೇ. ಯಾವುದೇ ಪಾದ್ರಿಯಾಗಲೀ ಈ ರೀತಿಯಾಗಿ ರೊಟ್ಟಿ ಮತ್ತು ದ್ರಾಕ್ಷಾರಸಗಳನ್ನು ಕ್ರಿಸ್ತನ ದೇಹ ರಕ್ತಗಳಾಗಿ ಪುನಃ ಸಮರ್ಪಿಸುವಂತೆ ಹೊಸದಾಗಿ ಪರಿವರ್ತನೆ ಮಾಡಬಹುದು ಎಂದು ಹೇಳುತ್ತಾರೆ. ಈ ರೀತಿಯಾಗಿ ಕ್ರಿಸ್ತನನ್ನು ಸೃಷ್ಟಿಸುವಾಗ ಘಂಟೆಯನ್ನು ಬಾರಿಸಲಾಗುತ್ತದೆ. ಆಗ ಪಾದ್ರಿಯೂ, ಜನರೂ ಅಡ್ಡ ಬಿದ್ದು ಆರಾಧಿಸುತ್ತಾರೆ ಮತ್ತು ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಪೂಜಿಸುತ್ತಾರೆ. ಮತ್ತು ಇವುಗಳನ್ನು ಅವರು ಕ್ರಿಸ್ತನೇ ಎಂದು ಗ್ರಹಿಸುತ್ತಾರೆ. ಈ ರೀತಿಯಾಗಿ ಮಾಡುವಾಗ ರೊಟ್ಟಿಯು (ಕ್ರಿಸ್ತನ

ನಿಜವಾದ ಮಾಂಸವಾಗಿ ಉಪಯೋಗಿಸಲ್ಪಡುವಂತೆ) ಮುರಿಯಲ್ಪಡುತ್ತದೆ, ಮತ್ತು ಈ ಕ್ರಿಸ್ತನು ಹೊಸದಾಗಿ ಪುನಃ ಪುನಃ ಸಮರ್ಪಿಸಲ್ಪಡುತ್ತಾನೆ ಮತ್ತು ವಿಶೇಷವಾದ ಪಾಪಗಳು ಈ ಮೂಲಕ ಅಳಿಸಿ ಹಾಕುತ್ತವೆ ಎಂಬುದಾಗಿ ಅವರು ಹೇಳುತ್ತಾರೆ.

ಈ ಅಸಂಬದ್ಧವಾದ ವಿಚಾರಸರಣಿಯನ್ನು ಹೊತ್ತುಕೊಂಡು, ಅದನ್ನು ಅದರೊಳಗೆ ಏಕರೂಪ ಗೊಳಿಸಲು ಶ್ರಮವಹಿಸುವಂತೆ ರೋಮನ್ ಕೈಥೋಲಿಕ್ ಕೂಟಗಳು ಅನೇಕ ದೀರ್ಘ ಆಜ್ಞೆಗಳನ್ನೂ ಮತ್ತು ವಿವರಣೆಗಳನ್ನು ಹೊರಡಿಸಿವೆ ಮತ್ತು ಬುದ್ಧಿವಂತ (?) ವೇದ ಪಂಡಿತರುಗಳು ಸಾವಿರಾರು ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕಲಿಸಿಕೊಟ್ಟಿರುದೇನೆಂದರೆ, ಒಂದೇ ಒಂದು ತೊಟ್ಟು ದ್ರಾಕ್ಷಾರಸ (ಕ್ರಿಸ್ತನ ರಕ್ತ) ಚೆಲ್ಲಿದರೆ ಅದನ್ನು ಜೋಪಾನವಾಗಿ ಕಾಪಾಡಿ, ಸುಟ್ಟು ಆ ಬೂದಿಯನ್ನು ಪವಿತ್ರ ಭೂಮಿಯಲ್ಲಿ ಹೂಳಬೇಕು (ಹಾಗೆ ರೊಟ್ಟಿ ಅಂದರೆ ಕ್ರಿಸ್ತನ ದೇಹವನ್ನು ಸಹಾ) ಅದರ ಒಂದು ಸಣ್ಣ ತುಣುಕೂ ಕಳೆದುಹೋಗಬಾರದು. ಒಂದು ನೊಣವಾದರೂ ದ್ರಾಕ್ಷಾರಸಕ್ಕೆ (ಕ್ರಿಸ್ತನ ರಕ್ತಕ್ಕೆ) ಬೀಳದಂತೆ, ಇಲಿ ಅಥವಾ ನಾಯಿಗೆ ರೊಟ್ಟಿಯ ಒಂದು ತುಣುಕೂ ಸಿಕ್ಕದಂತೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನೂ ಮಾಡಲಾಗಿದೆ. ಅವರ ಒಬ್ಬ ಮುಂದಾಳು ವೇದಶಾಸ್ತ್ರಜ್ಞರಾದ ಡಾ॥ ಡೆನ್ಸ್ ಎಂಬುವವರು "ಇಲಿ ಅಥವಾ ನಾಯಿ ಸಂಸ್ಕಾರದ ಪವಿತ್ರ ವಸ್ತುಗಳನ್ನು ತಿನ್ನುವಾಗ ಅದನ್ನು ಅವು ಸಂಸ್ಕಾರಬದ್ಧವಾಗಿ ತಿನ್ನುವುದಿಲ್ಲ. ಆದಾಗ್ಯೂ ಆ ಸಮಯದಲ್ಲಿ ಕ್ರಿಸ್ತನ ದೇಹವು ಆ ಪವಿತ್ರ ವಸ್ತುಗಳಲ್ಲಿ ಉಳುಕೊಳ್ಳದೇ ಇರುವುದಿಲ್ಲ" ಎಂಬ ವಿವರಣೆ ನೀಡಿದ್ದಾರೆ*. ರೋಮನ್ ಕೈಥೋಲಿಕ್ (ಅಮೇರಿಕನ್) ಪ್ರಶ್ನೋತ್ತರ ರೂಪದ ಗ್ರಂಥಗಳು ಈ ಸಿದ್ಧಾಂತಗಳನ್ನು ಹೀಗೆ ಹೇಳುತ್ತವೆ –

ಪ್ರಶ್ನೆ : ಪವಿತ್ರ ಯೂಕರಿಸ್ಟ್ ಅಂದರೆ ಏನು?

ಉತ್ತರ : ಇದೊಂದು ಪವಿತ್ರ ಸಂಸ್ಕಾರವಾಗಿದ್ದು ಇದರಲ್ಲಿ ಯೇಸುಕ್ರಿಸ್ತನ ದೇಹ ಮತ್ತು ರಕ್ತಗಳು, ಆತ್ಮ ಮತ್ತು ದೈವತ್ವವು ರೊಟ್ಟಿ ಮತ್ತು ದ್ರಾಕ್ಷಾರಸದ ರೂಪದಲ್ಲಿ ಮತ್ತು ತೋರಿಕೆಯಲ್ಲಿ ಅಡಗಿವೆ.

ಪ್ರಶ್ನೆ : ಮಾಸ್ ಆಚರಣೆಗೆ ಬಲಿ ಪೀಠದ ಮೇಲೆ ಮೊದಲಿಗೆ ಇಡುವುದು ರೊಟ್ಟಿ ಮತ್ತು ದ್ರಾಕ್ಷಾರಸವಲ್ಲವೇ?

ಉತ್ತರ : ಹೌದು. ಪಾದ್ರಿಯು ಮಾಸ್ ಸಮಯದಲ್ಲಿ ಪವಿತ್ರ ಸಂಪ್ರೋಕ್ಷಣೆ ಮಾಡುವವರೆಗೂ ಅವುಗಳು ರೊಟ್ಟಿ ಮತ್ತು ದ್ರಾಕ್ಷಾರಸ ಎಂಬುದು ನಿಜ.

ಪ್ರಶ್ನೆ : ಆ ಸಂಪ್ರೋಕ್ಷಣಾ ನುಡಿಗಳಿಂದ ಏನಾಗುತ್ತದೆ ?

ಉತ್ತರ : ರೊಟ್ಟಿಯು ಕ್ರಿಸ್ತನ ದೇಹವಾಗಿ ಮಾರ್ಪಡಿಸಲ್ಪಡುತ್ತದೆ, ದ್ರಾಕ್ಷಾರಸವು ಆತನ ರಕ್ತವಾಗಿ ಮಾರ್ಪಡಿಸಲ್ಪಡುತ್ತದೆ,

ಪ್ರಶ್ನೆ : ಈ ಪರಿವರ್ತನೆಯನ್ನು ಏನೆಂದು ಕರೆಯುತ್ತಾರೆ ?

ಉತ್ತರ : ಅದನ್ನು Transubstantiation (ಪರಿವರ್ತನೆ) ಎಂದು ಕರೆಯುತ್ತಾರೆ ಅಂದರೆ ಒಂದು ವಸ್ತು ಮತ್ತೊಂದು ವಸ್ತುವಾಗಿ ಬದಲಾಗುವುದು

ಪ್ರಶ್ನೆ : "ಮಾಸ್" ಎಂದರೆ ಏನು?

ಉತ್ತರ : ಮಾಸ್ ಎಂದರೆ ನೂತನ ನಿಯಮದ ಸತತವಾದ (ಪ್ರತಿನಿತ್ಯ ಅಥವಾ ನಿರಂತರವಾದ) ಹೋಮವಾಗಿದೆ. ಇದರಲ್ಲಿ ನಮ್ಮ ಕರ್ತನಾದ ಯೇಸು ಒಮ್ಮೆ ಶಿಲುಬೆಯಲ್ಲಿ ರಕ್ತಧಾರೆಯೊಂದಿಗೆ ಸಮರ್ಪಿಸಿಕೊಂಡಂತೆ ಈಗ ಪಾದ್ರಿಯ ಕೈಯಿಂದ ರಕ್ತಧಾರೆ ಇಲ್ಲದ ರೀತಿಯಲ್ಲಿ ರೊಟ್ಟಿ ಮತ್ತು ದ್ರಾಕ್ಷಾರಸಗಳ ತೋರಿಕೆಯಲ್ಲಿ ತನ್ನ ಪರಲೋಕದ ತಂದೆಗೆ ಸಮರ್ಪಿಸಲ್ಪಡುತ್ತಾನೆ.

ಪ್ರಶ್ನೆ : ಮಾಸ್ ನಡೆಯುವ ಸಮರ್ಪಣೆಗೂ, ಶಿಲುಬೆಯ ಮೇಲೆ ನಡೆದ ಸಮರ್ಪಣೆಗೂ ವ್ಯತ್ಯಾಸವೇನು?

ಉತ್ತರ : ಮಾಸ್‌ನಲ್ಲಿನ ಸಮರ್ಪಣೆಯು ಅವಶ್ಯವಾಗಿ ಶಿಲುಬೆಯ ಮೇಲೆ ನಡೆದ ಸಮರ್ಪಣೆಯ ರೀತಿಯಲ್ಲಿಯೇ ಇರುತ್ತದೆ. ಆದರೆ ಒಂದೇ ಒಂದು ವ್ಯತ್ಯಾಸವೆಂದರೆ ಸಮರ್ಪಣೆಯ ರೀತಿ ಮಾತ್ರ.

ಪ್ರಶ್ನೆ : ಮಾಸ್ ಒಂದು ಸಮಾಧಾನಪಡಿಸುವಿಕೆಯ (ಪಾಪನಿವಾರಣೆಯ) ಸಮರ್ಪಣೆಯಾಗಿ ಯಾವ ಪರಿಣಾಮವನ್ನು ಹೊಂದಿದೆ?

ಉತ್ತರ : ಅದರಿಂದ ನಮಗೆ ಮೊದಲಾಗಿ ದೈವಿಕ ಕರುಣೆ, ಪಾಪಗಳಿಗಾಗಿ ಪಡುವ ಪಶ್ಚಾತ್ತಾಪ ಮತ್ತು ಮರುಗುವಿಕೆಗಳ ಕೃಪೆಗಳು ನಮಗೆ ದೊರಕುತ್ತವೆ. ಎರಡನೆಯದಾಗಿ, ಪಾಪಗಳಿಗೆ ಅರ್ಹವಾದ ಲೌಕಿಕ ಶಿಕ್ಷೆಗಳಿಂದ ಬಿಡುಗಡೆ ದೊರೆಯುತ್ತದೆ.

ಪ್ರಶ್ನೆ : "ಮಾಸ್"ನ ಫಲಗಳು ಯಾರಿಗೆ ಅನ್ವಯಿಸುತ್ತವೆ ?

* Dens, Track. De Euchar., No 20, p. 314

ಉತ್ತರ : ಸಾಮಾನ್ಯವಾದ ಫಲಗಳು ಸತ್ತ ಮತ್ತು ಜೀವಿಸುತ್ತಿರುವ ಸಮಗ್ರ ಸಭೆಯವರಿಗೆ ಅನ್ವಯಿಸುತ್ತವೆ. ವಿಶೇಷವಾದ ಫಲಗಳು ಮೊದಲು ಮುಖ್ಯವಾಗಿ ಮಾಸ್ ಆಚರಿಸಿದ ಪಾದ್ರಿಗೆ ಅನ್ವಯಿಸುತ್ತದೆ. ಎರಡನೆಯದಾಗಿ ನಿರ್ದಿಷ್ಟವಾಗಿ ಇದನ್ನು ಯಾರಿಗಾಗಿ ಆಚರಿಸುತ್ತಾನೋ ಅವರಿಗೆ ಅನ್ವಯಿಸುತ್ತವೆ ಮತ್ತು ಮೂರನೆಯದಾಗಿ, ಅದಕ್ಕೆ ಭಕ್ತಿಪೂರ್ವಕವಾಗಿ ಸಹಾಯ ಮಾಡಿದವರಿಗೆ [ಅಂದರೆ ಮಾಸ್‍ನಲ್ಲಿ ಆರಾಧಿಸಲು ಕೂಡಿಬಂದವರಿಗೆ].

ಅದೇ ಅಧಿಕಾರವು ಹೇಳುವುದೇನೆಂದರೆ, "ಸಮರ್ಪಣೆ ಮಾಡುವಾತನು ಪಾದ್ರಿ; ಆತನು ಸಮರ್ಪಣೆ ಮಾಡುವ ಇಂದ್ರಿಯಗೋಚರವಾದ ವಸ್ತುವನ್ನು ಆಹುತಿ (victim) ಎಂಬುದಾಗಿ ಕರೆಯುತ್ತಾರೆ; ಸಮರ್ಪಿಸುವ ಜಾಗವನ್ನು ಬಲಿಪೀಠ (altar) ಎಂದು ಕರೆಯುವುದು. ಪಾದ್ರಿ, ಆಹುತಿ ಸಮರ್ಪಣೆ ಮತ್ತು ಬಲಿಪೀಠ (priest, victim, altar and sacrifice) ಎಂಬ ಈ ನಾಲ್ಕು ಸಂಗತಿಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ, ಅದರಲ್ಲಿ ಒಂದು ಮತ್ತೊಂದನ್ನು ಹೊಂದಿಕೆಯಾಗಿದೆ".

ಪುನಃ ಈ ಆಚರಣೆಯನ್ನು ವಿವರಿಸುವಂತೆ ಪಾದ್ರಿಯ ಬಗ್ಗೆ ಇದು ಹೀಗೆ ಹೇಳುತ್ತದೆ :–

"ನಂತರದಲ್ಲಿ ಆತನು ಸಂಪ್ರೋಕ್ಷಣೆಯ ರಹಸ್ಯಗರ್ಭಿತವಾದ ಮಾತುಗಳನ್ನು ನುಡಿಯುತ್ತಾನೆ. ಮೊಣಕಾಲೂರುತ್ತಾ ಆರಾಧಿಸುತ್ತಾನೆ, ಮತ್ತು ಪವಿತ್ರವಾದ ದೇಹವನ್ನು ಮತ್ತು ಪವಿತ್ರವಾದ ರಕ್ತವನ್ನು ತನ್ನ ತಲೆಯ ಮೇಲಕ್ಕೆ ಎತ್ತುತ್ತಾನೆ. ಗಂಟೆಯ ನಾದವು ಕೇಳಿಸುವಾಗ ಸಭೆಯವರು ಮೊಣಕಾಲೂರಿ ಆರಾಧಿಸುತ್ತಾರೆ. ಮತ್ತು ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡುವವರಾಗಿ ತಮ್ಮ ಎದೆಗಳನ್ನು ಬಡಕೊಳ್ಳುತ್ತಾರೆ. ಪಾದ್ರಿಯು ದೇವರಿಗೆ ಕೃಪಾಪೂರ್ವಕವಾಗಿ ಸಮರ್ಪಣೆಯನ್ನು ಸ್ವೀಕರಿಸುವಂತೆ ಬೇಡಿಕೊಳ್ಳುತ್ತಾನೆ".

ನಾವು ಈ ವಿಷಯವಾದ ಸಾಕ್ಷಿಯನ್ನು 'Canons of the Council of Trent'* ನ ಕೆಳಕಂಡ ಉಕ್ತಿಯೊಡನೆ ಮುಗಿಸುತ್ತೇವೆ :

3ನೇ Canon (ಕಾನೂನು): ಯಾರಾದರೂ ಮಾಸ್ ಎಂಬುದು ಕೇವಲ ಸ್ತೋತ್ರ ಮತ್ತು ಕೃತಜ್ಞತಾ ಸಮರ್ಪಣಾ ಆರಾಧನೆ ಎಂದು ಹೇಳುವುದಾದರೆ, ಅಥವಾ ಶಿಲುಬೆಯ ಮಾಡಿದ ಸಮರ್ಪಣೆಯ ಬರಿಯ ಸ್ಮಾರಕ, [ಅದಾಗಿಯೇ] ಅದೊಂದು ಪ್ರಾಯಶ್ಚಿತ್ತಾರ್ಥಕ ಸಮರ್ಪಣೆ [ಅಂದರೆ, ಪಾಪಗಳನ್ನು ತೃಪ್ತಿಪಡಿಸುವ ಸಮರ್ಪಣೆ] ಅಲ್ಲ, ಅಥವಾ ಅದು ಅದನ್ನು ಸ್ವೀಕರಿಸುವಾತನಿಗೆ ಮಾತ್ರ ಲಾಭದಾಯಕ, ಅದನ್ನು ಜೀವಿಸುವವರಿಗಾಗಲೀ, ಸತ್ತವರಿಗಾಗಲೀ, ಪಾಪಗಳಿಗಾಗಲೀ, ಶಿಕ್ಷೆಗಳಿಗಾಗಲೀ, ತೃಪ್ತಿಗಾಗಲೀ ಮತ್ತು ಇತರ ಅಗತ್ಯತೆಗಳಿಗಾಗಲೀ ಸಮರ್ಪಿಸಕೂಡದು ಎಂದು ಹೇಳುವುದಾದರೆ, ಅಂಥವನನ್ನು (ಈ ಸಮರ್ಪಣೆಯ ಶಕ್ತಿಯನ್ನು ನಿರಾಕರಿಸುವವನನ್ನು) ಶಾಪಗ್ರಸ್ಥನನ್ನಾಗಿ ಮಾಡಬೇಕು".

ಈ ರೀತಿಯಲ್ಲಿ ನಾವು ಪೋಪನ ಅಧಿಕಾರವು ಒಂದು ತಪ್ಪಾದ ಮತ್ತು ಕಪಟವಾದ ಸಮರ್ಪಣೆಯನ್ನು ಶಾಶ್ವತವಾದ, ಸಂಪೂರ್ಣವಾದ, ಎಂದೂ ಪುನರ್ವತಿಸ ಬಾರದ ಕಲ್ವಾರಿಯಲ್ಲಿನ ಎಲ್ಲಾ ಕಾಲಕ್ಕೂ ಅನ್ವಯವಾಗುವಂತೆ ಒಂದೇ ಸಾರಿ ಮಾಡಿದ ಸಮರ್ಪಣೆಯ ಬದಲಿಯಾಗಿ ತಂದಿದೆ ಎಂದು ಸ್ಪಷ್ಟವಾಗಿ ಕಾಣಬಹುದು. ಈ ರೀತಿಯಲ್ಲಿ ಪೋಪನ ಅಧಿಕಾರವು ಯೇಸುಕ್ರಿಸ್ತನ ನಿರಂತರವಾದ ಹೋಮವನ್ನು ಸರಿಯಾದ ರೀತಿಯಲ್ಲಿ ಪ್ರಶಂಸಿಸದೆ ತನ್ನ ಪಾದ್ರಿಗಳೇ ನೆರವೇರಿಸುವ ಇಂಥಾಃ ಕಪಟವಾದ ಬದಲಿ ಆಚರಣೆಯಿಂದ ಅದರ ಅರ್ಹತೆಯನ್ನು ಕಸಿದುಕೊಂಡಿದೆ. ಪೋಪನ ಅಧಿಕಾರವು ಯಾವ ಕಾರಣಗಳಿಗಾಗಿ ನಿರಂತರವಾದ ಹೋಮವನ್ನು ಅಸಹ್ಯವಾದ "ಮಾಸ್" ಎಂಬ ಬದಲಿ ಸಮರ್ಪಣಾ ಆಚರಣೆಯ ಮೂಲಕ ಬದಿಗೆ ಸರಿಸಿತು ಎಂಬುದನ್ನು ಇಲ್ಲಿ ವಿವರಿಸುವ ಅಗತ್ಯವಿಲ್ಲ. ಯಾಕೆಂದರೆ, ನಮ್ಮ ಹೆಚ್ಚಿನ ಓದುಗರಿಗೆ ಈ ಪಾದ್ರಿಗಳೇ ಮಾಸ್‍ನಲ್ಲಿ ಪಾಪನಿವಾರಣಾರ್ಥ ಕೈಕೊಳ್ಳುವುದು, ಅದಿಲ್ಲದೆ ಅವುಗಳನ್ನು ಅಳಿಸಲು ಸಾಧ್ಯವಿಲ್ಲ, ಅವುಗಳ ದಂಡನೆಯನ್ನು ತಪ್ಪಿಸಲಾಗದು ಎಂಬ ಸಿದ್ಧಾಂತವು ರೋಮಿನ ಸಭೆಯ ವಿವಿಧ ವ್ಯವಸ್ಥೆಗಳ ಬುನಾದಿಯಲ್ಲಿಯೇ ತಮ್ಮ ದುಂದುಗಾರಿಕೆ ಮತ್ತು ಭೋಗಗಳಿಗಾಗಿ ಜನರಿಂದ ಹಣವನ್ನು ಕಸಿದುಕೊಳ್ಳುವ ವಿಧಾನವೆಂದು ಕಂಡುಬರುತ್ತದೆ. ಪ್ರಸ್ತುತ ಅಥವಾ ಭಾವಿ ಜೀವನದಲ್ಲಿ, ಸತ್ತವರಿಗೆ ಅಥವಾ ಜೀವಿಸುವವರಿಗೆ 'ಕ್ಷಮಾದಾನ' 'ತೃಪ್ತಿಪಡಿಸುವಿಕೆಗಳು' ("Absolutions", "Indulgences") ಮತ್ತು ಇನ್ನೂ ವಿವಿಧವಾದ ಲಾಭದಾಯಕ, ಅನುಕೂಲಕರ, ಸವಲತ್ತುಗಳನ್ನು, ವಿನಾಯತಿಗಳನ್ನು ನೀಡುವವುಗಳು ಎಂದು ಭಾವಿಸುವ ಸಂಗತಿಗಳು 'ಮಾಸ್' ಎಂಬ ಈ ದೇವದೂಷಣಾ

* Concil. Trid., Sess. 22. De Sacrificio Missae.

ಸಿದ್ಧಾಂತದ ಮೇಲೆ ಆತುಕೊಂಡಿದೆ. ಇದೊಂದು ಧರ್ಮಭ್ರಷ್ಟತೆ ಮೂಲಭೂತವಾದ ಸಿದ್ಧಾಂತವಾಗಿದೆ. ಪಾದ್ರಿಗಳ ಮೇಲೆ ಹೊರಿಸಿದ ಈ ಮಾಸ್‌ನಲ್ಲಿನ ಸಮರ್ಪಣಾ ಆಚರಣೆಯು ಶಕ್ತಿ ಮತ್ತು ಅಧಿಕಾರಗಳಿಂದಾಗಿ, ಅವರ ಇತರೆ ದೇವದೂಷಣಾ ಹೇಳಿಕೆಗಳು ಕ್ರಿಸ್ತನಿಗೆ ಮಾತ್ರ ಇರುವ ವಿವಿಧ ವಿಶೇಷ ಅಧಿಕಾರಗಳನ್ನು ಕಾರ್ಯಗತಗೊಳಿಸುವಂತೆ ಮಾಡಿ ಜನರ ನೈತಿಕ ಬೆಂಬಲಪಡಕೊಳ್ಳುತ್ತವೆ.

ಈ ತಪ್ಪಿನ ಮೂಲಭೂತ ಲಕ್ಷಣದ ಪುರಾವೆಯಾಗಿ, ಜರ್ಮನಿ ಮತ್ತು ಸ್ವಿಜರ್‌ಲ್ಯಾಂಡಿನ ಸುಧಾರಣೆಗಳು ಇಂತಹ ಇಚ್ಛಾಪೂರ್ಣತೆಯ ವಿರೋಧವಾಗಿ ಪ್ರಾರಂಭ ಗೊಂಡವು. ಅದು ಕೂಡಲೇ Transubstantiation (ಪರಿವರ್ತನೆ)ಗೆ ಅಂದರೆ 'ಮಾಸ್' ನ ಸಮರ್ಪಣೆಗೆ ಸವಾಲಾಯಿತು. ಸುಧಾರಣ ಚಳುವಳಿಕೆ ಮೂಲೆಗಲ್ಲು 'ಪಾಪ ಪರಿವಾರವು ಕ್ರಿಸ್ತನಿಂದ ಮಾತ್ರವೇ. ಅದು ಆತನು ಕಲ್ವಾರಿಯಲ್ಲಿ ಅರ್ಪಿಸಿದ ಸ್ವಸಮರ್ಪಣೆಯಿಂದಾಗಿಯೇ ಹೊರತು ಮಾಸ್‌ಗಳಲ್ಲಿ ಕಂಡುಬರುವ ಯಾವುದೇ ತೃಪ್ತಿಪಡಿಸುವಿಕೆ, ಅಥವಾ ಅರಿಕೆಗಳ ಮೂಲಕವಲ್ಲ' ಎಂಬುದು. ನಿಜವಾಗಿಯೂ ಮಾಸ್‌ನ ಈ ಪ್ರಶ್ನೆಯು ರೋಮಿನ ಎಲ್ಲಾ ಕಿರುಕುಳಗಳ ತಳದಲ್ಲಿದೆ. ಬಿಷೋಪ್ Tilostson ಎಂಬಾತನು "ಇದು [Transubstantiation (ಪರಿವರ್ತನೆ)] ರೋಮಿನ ಸಭೆಯಲ್ಲಿ ಒಂದು ಉರಿಯುವ ಕಟ್ಟಳೆ (ನಿಬಂಧನೆ) ವಸ್ತುವಾಗಿತ್ತು ಮತ್ತು ಅದು ಅಸಂಬದ್ಧವೂ ಮತ್ತು ಅನುಚಿತವಾದದ್ದೂ ಆಗಿದ್ದು ಧರ್ಮದ ಇತರೆ ಕಟ್ಟಳೆ/ನಿಬಂಧನೆಗಿಂತ ಹೆಚ್ಚಾಗಿ ಬಹು ಮಂದಿ ಕ್ರೈಸ್ತರು ಅದನ್ನು ನಿರಾಕರಿಸಿದ್ದರಿಂದ ಹತ್ಯೆಗೊಂಡರು" ಎಂದು ಹೇಳಿದ್ದಾನೆ.

ಖಂಡಿತವಾಗಿಯೂ ರೋಮ್ ಪರವಾದಿಗಳು 'ಮಾಸ್' ಎಂಬುದು ಕ್ರಿಸ್ತ ಮತ್ತು ಅಪೋಸ್ತಲರಿಂದ ಸ್ಥಾಪಿತವಾಯಿತೆಂದು ಹೇಳುತ್ತಾರೆ; ಆದರೆ ಅದನ್ನು ನಾವು ಅತ್ಯಂತ ಮುಂಚಿನ ಹೇಳಿಕೆಯಾಗಿ ಕ್ರಿ.ಶ. 381ರಲ್ಲಿ ಕಾನ್ಸ್ಟಾಂಟಿನೋಪಲ್‌ನಲ್ಲಿ ನಡೆದ ಸಭಾಕೂಟದಲ್ಲಿ ಕಾಣುತ್ತೇವೆ. ಆದಾಗ್ಯೂ, ಈ ಅಪವಿತ್ರವಾದ ತಪ್ಪಿನ ಪರಿಚಯದ ದಿನಾಂಕವನ್ನು ಪ್ರವಾದನೆಯಲ್ಲಿ ಎಲ್ಲೂ ಉಲ್ಲೇಖಿಸಿಲ್ಲ, ಈ ಮೂಲಭೂತ ತಪ್ಪಿನ ಕಾರಣ ಪೋಪನ ಅಧಿಕಾರವು 'ಹಾಳು ಮಾಡುವ ಅಸಹ್ಯವಸ್ತುವಾಯಿತು' ಎಂಬದನ್ನು ಹೊರತುಪಡಿಸಿ, ಮೊದಲು ಅದು ಹಾಗೆಯೇ ಅಧಿಕಾರದಲ್ಲಿ ಹೊಂದಿತ್ತು. ಇದನ್ನು ನಾವು ಕ್ರಿ.ಶ. 539ರಲ್ಲಿ ನೋಡಿದ್ದೇವೆ.

ಪ್ರವಾದನೆಯು ದೃಢಪಡಿಸುವುದೇನೆಂದರೆ, "ಇದನ್ನು ಆತನ (ಕ್ರಿಸ್ತನ) ನಿರಂತರವಾದ ಹೋಮವನ್ನು ಕಸಿದುಕೊಂಡಿತು" ಮತ್ತು "ಮತ್ತು ಆತನ ಪವಿತ್ರಾಲಯದ ತಳಹದಿಯನ್ನು ಉರುಳಿಸಲಾಗಿದೆ ಎಂದು ಸೇರಿಸುತ್ತದೆ. ತಳಹದಿ ಅಥವಾ ಅಡಿಪಾಯ – ಈ ಸತ್ಯದ ಮೇಲೆ ಪ್ರತಿಷ್ಠೆಹೊಂದಿದ ವರ್ಗದವರು ಕಟ್ಟಲ್ಪಟ್ಟ ಸತ್ಯದ ಬುನಾದಿಯೆಂದರೆ ಯೇಸುಕ್ರಿಸ್ತನು ತಾನೇ ಆಗಿದ್ದಾನೆ, ತನ್ನನ್ನು ಬಲಿಯಾಗಿ ಅರ್ಪಿಸಿಕೊಂಡು ಎಲ್ಲರನ್ನೂ ವಿಮೋಚಿಸಿದ್ದಾನೆ, ಪಾದ್ರಿ, ಬಿಷೋಪ್, ಪೋಪ್ ಮುಂತಾದ ಬೇರೆ ಯಾವ ಮಧ್ಯಸ್ಥಗಾರರಿಲ್ಲದೆ ಮತ್ತು ಬೇರೆ ಯಾವ ಬಲಿದಾನವಿಲ್ಲದೆ – ತನ್ನ ಮೂಲಕ ದೇವರ ಬಳಿಗೆ ಬಂದವರೆಲ್ಲರನ್ನೂ ಸಂಪೂರ್ಣವಾಗಿ ರಕ್ಷಿಸಿದ್ದಾನೆ. ಬೇರೆ ಯಾವುದೇ ಆದರೂ ದೇವರ ದೃಷ್ಟಿಯಲ್ಲಿ ಅಸಹ್ಯಕರ. ಯಾಕೆಂದರೆ, ಕ್ರಿಸ್ತನ ಮಹಾ ತ್ಯಾಗವು ಅಸಂಪೂರ್ಣ ಎಂದು ಸೂಚ್ಯವಾಗಿ ಬೋಧಿಸಿದಂತಾಗುತ್ತದೆ (ಇಬ್ರಿಯ 7:25; 10:14).

ಈಡುಬಲಿಯ ಈ ಸಿದ್ಧಾಂತವು ಪವಿತ್ರಾಲಯ ಅಥವಾ ಪವಿತ್ರ ದೇವಾಲಯದ, ಪ್ರತಿಷ್ಠೆಹೊಂದಿದ ಸಭೆಯ ತಳಹದಿಯಾಗಿದೆ. ಈ 'ನಿರಂತರ'ವನ್ನು ಸ್ಥಳಾಂತರಗೊಳಿಸಿದಾಗ, ನಿರರ್ಥಕಗೊಳಿಸುವಾಗ ಅಥವಾ ಮಾಸ್‌ನಿಂದ ಮಗುಚಿಹಾಕಿದಾಗ ಪ್ರವಾದಿಯು ಮುಂತಿಳಿಸಿದ ಕೇಡುಗಳು ಹಿಂಬಾಲಿಸಿತು. ದೊಡ್ಡ ಗುಂಪು (ಹೆಸರು ಮಾತ್ರದ ಕ್ರೈಸ್ತರನ್ನು) ಗುಂಪಿನ ಅರಸರು ಅಥವಾ ಅವರ ಆಡಳಿತಗಾರರೂ ಸೇರಿದಂತೆ ಈ ತಪ್ಪಿಗೆ ವಶವಾದರು, ತನ್ನನ್ನು ಹೆಚ್ಚಿಸಿಕೊಂಡಿರುವ (ಅದರ ಮುಖ್ಯಸ್ಥ ಅಥವಾ ಪೋಪನ) ತಪ್ಪು ಪದ್ದತಿಯಿಂದ ಸುಲಭವಾಗಿ ಅದಕ್ಕೆ ನಡಿಸಲಾಯಿತು. "ಸತ್ಯಧರ್ಮವನ್ನು ನೆಲಕ್ಕೆ ದೊಬ್ಬಿ" (ದಾನಿಯೇಲ 8:12) ಅಂಥಾಃ ಕ್ರೈಸ್ತ ಸಮೂಹದವರೊಡನೆ, ಪ್ರಕಾಶಿಸುವ ಬೆಳಕಿನವರನ್ನು ಅಥವಾ ಸತ್ಯಕ್ಕೆ ಗಟ್ಟಿಯಾಗಿ ಅಂಟಿಕೊಂಡಿರುವ ಮತ್ತು ಅವರೊಂದಿಗೆ ಅತಿಕ್ರಮಣದ ಪಥದಲ್ಲಿ ಅನ್ಯೋನ್ಯಗೊಳ್ಳದ ಬೋಧಕರನ್ನು ಕೆಳಕ್ಕೆ ಬಿಸಾಡುವುದು". ಈ ಹಿಂದಿನ ಅಧ್ಯಾಯಗಳಲ್ಲಿ ನೋಡಿದಂತೆ, ಅದು ತನ್ನ ಕಾರ್ಯಗಳಲ್ಲಿ ಅದ್ಭುತವಾಗಿ ವೃದ್ಧಿಪಡೆಯಿತು.

ಸತ್ಯ ಕ್ರೈಸ್ತರ ನಂಬಿಕೆಯ ಬುನಾದಿಯನ್ನು ಈ ರೀತಿಯಲ್ಲಿ ಪಕ್ಕಕ್ಕೆ ಸರಿಸಲ್ಪಟ್ಟಿರುವಾಗ, ಮಹಾ ಧರ್ಮಭ್ರಷ್ಟತೆಯು ಅದು ಮಾಡಿದ ಅಂತಹ ದುಷ್ಟತನದಲ್ಲಿ ಆಳವಾಗಿ ಬೀಳುವುದು ಆಶ್ಚರ್ಯವೋ? ಒಂದು ತಪ್ಪು ಮತ್ತೊಂದಕ್ಕೆ ನಡೆಸಿತು. ಸತ್ಯ ಮತ್ತು ದೈವತ್ವದ ಬಾಹ್ಯರೂಪಗಳು ಮಾತ್ರವೇ ಉಳಿಯುವವರೆಗೆ

ನಡೆಸಿತು ಮತ್ತು ಹಾಳುಮಾಡುವ ಅಸಹ್ಯವಸ್ತುವು ದೇವರ ಆಲಯದಲ್ಲಿ ಕುಳಿತಿದ್ದು, ಪವಿತ್ರಾಲಯವನ್ನೂ ಸಮೂಹದವರನ್ನೂ ಅಪವಿತ್ರಗೊಳಿಸಿದೆ ಮತ್ತು ಅದರ ಮುಖ್ಯಸ್ತನನ್ನು ಕ್ರಿಸ್ತನ ಮತಬೋಧಕ ಅಥವಾ ಪ್ರತಿನಿಧಿ ಎಂದು ಎತ್ತರಕ್ಕೆ ಏರಿಸಿದೆ.

ಈ ಅಸಹ್ಯಕರವಾದ ಹಾಳುಮಾಡುವ ವಸ್ತುವಿನ ಈ ಸಫಲತೆಯ ದೃಶ್ಯಗಳ ಮಧ್ಯೆ, ದಾನಿಯೇಲನು **"ನಿತ್ಯಹೋಮವನ್ನು ನಿಲ್ಲಿಸುವುದು, ಭಯಂಕರವಾದ ದೇವದ್ರೋಹವಮಾಡುವುದು, ಪವಿತ್ರಾಲಯುವನ್ನು ದೈವಭಕ್ತ ಗಣವನ್ನೂ ತುಳಿಯುವುದು ಎಂಬ ಕನಸಿನ ಕಾರ್ಯಗಳು ಎಷ್ಟು ಕಾಲ ನಡೆಯುವುವು?"** (ದಾನಿಯೇಲ 8:13) ಎಂಬ ಪವಿತ್ರರ ಮಾತುಗಳನ್ನು ಕೇಳಿಸಿಕೊಳ್ಳುತ್ತಾನೆ. ಹಾಳುಮಾಡುವಿಕೆಯು ಪ್ರಾರಂಭವಾದುದರಿಂದ ಇದುವರೆಗೆ ಭಕ್ತರುಗಳು ಹೆಚ್ಚುಕಡಿಮೆ ಅದರ ಗುಣಲಕ್ಷಣಗಳನ್ನು ಮತ್ತು ಹಾಳುಮಾಡುವಿಕೆಗಳನ್ನು ಗ್ರಹಿಸಿದರು, ಮತ್ತು ವ್ಯಾಕುಲತೆಯಿಂದ **"ಕರ್ತನೇ, ಎಷ್ಟರವರೆಗೆ ಸತ್ಯವು ಜೌಗುನೆಲದಲ್ಲಿ ತುಳಿಯಲ್ಪಡಬೇಕು? ತಪ್ಪು, ದೇವದೂಷಣೆ, ಮತ್ತು ಹಾಳುಮಾಡುವಿಕೆಗಳು ಎಷ್ಟರವರೆಗೆ ಅಭಿವೃದ್ಧಿಹೊಂದಬೇಕು? ಕ್ರಿಸ್ತ ವಿರೋಧಿಯು ಇನ್ನೆಷ್ಟು ಕಾಲ ಭಕ್ತರುಗಳ, ಕ್ರಿಸ್ತನ ಹತಸಾಕ್ಷಿಗಳ ರಕ್ತದಿಂದ ಅಮಲೇರಿದವನಾಗಿರಬೇಕು? ಮತ್ತು ಅದರ ಲೋಕೋತ್ತರ ಜಯದಿಂದ ಮತ್ತರಾಗಿ ಮುಂದುವರೆಯುತ್ತಾ ಜನಾಂಗಗಳನ್ನು ಮೋಸ ಗೊಳಿಸಬೇಕು?"** (ಪ್ರಕಟನೆ 17:2,6; 14:8; 18:3) ಎಂದು ಮೊರೆಯಿಡುತ್ತಾರೆ. ಅವರ, ದಾನಿಯೇಲನ ಮತ್ತು ನಮ್ಮ ವಿಚಾರಣೆಗಳನ್ನು ಮುಂಗ್ರಹಿಸಿ ದೇವರು ಆತನ ಸಂದೇಶವಾಹಕನ ಮೂಲಕವಾಗಿ ಮುಂಗಡವಾಗಿ ಉತ್ತರಿಸಿದ್ದಾನೆ. ಅವಧಿಯನ್ನು ಅಂತ್ಯಕಾಲದ ಪ್ರಾರಂಭದವರೆಗೆ ಅರ್ಥಮಾಡಿ ಕೊಳ್ಳಲಾಗದಿದ್ದರೂ, ಸಮಯವನ್ನು ನಿಗದಿಪಡಿಸುವುದು ಅಥವಾ ಮಿತಿಗೊಳಿಸುವ ಬಗ್ಗೆ ಭರವಸೆಯನ್ನು ಇತರರಿಗೂ, ದಾನಿಯೇಲನಿಗೂ ನೀಡಲಾಗಿದೆ. ದೇವರು ಈ ಪರಿಸ್ಥಿತಿಯ ಬಗ್ಗೆ ಸಂಪೂರ್ಣವಾದ ನಿಯಂತ್ರಣ ಹೊಂದಿದ್ದಾನೆ, ಆತನು ನಿಯಂತ್ರಿಸಲಾಗದ ಯಾವುದೂ ನೆರವೇರದು ಮತ್ತು ಅಂತಿಮದಲ್ಲಿ ಒಳ್ಳೆಯದಕ್ಕಾಗಿ ಬೇರೆಲ್ಲವೂ ತಳ್ಳಿಹಾಕಲ್ಪಡುವುದು. ಈ ಉತ್ತರವು ಶುದ್ಧೀಕರಣದ ಕಾರ್ಯವನ್ನು ಗುರುತಿಸುವುದಿಲ್ಲ, ಆದರೆ ಅದು ಯಾವ ಅಳತೆಯಲ್ಲಿ ಮುಕ್ತಾಯಗೊಳ್ಳುತ್ತದೆ ಎಂಬುದನ್ನು ತಿಳಿಸುತ್ತದೆ. ಅದನ್ನು ಈ ರೀತಿಯಾಗಿ ಓದಬಹುದು : **"ಉದಯಾಸ್ತಮಾನಗಳ ಎರಡು ಸಾವಿರದ ಮುನ್ನೂರರವರೆಗೆ ನಡೆಯುವುವು; ಅನಂತರ ಪವಿತ್ರಾಲಯುಕ್ಕೆ ಪುನಃ ಸ್ಥಾಪನೆಯಾಗುವುದು"** (ದಾನಿಯೇಲ 8 : 14). **"Until two thousand three hundred days, then shall the Sanctuary be Cleansed"** (Daniel 8:14).

ಈ ಸಮಯಾವಧಿಯನ್ನು ಪರೀಕ್ಷೆಮಾಡುವಲ್ಲಿ ವಿದ್ಯಾರ್ಥಿಗಳಿಗೆ ಅಕ್ಷರಶಃವಾದ ದಿನಗಳ ಅರ್ಥವಲ್ಲ ಎಂಬುದು ತಕ್ಷಣವೇ ಹೊಳೆಯುತ್ತದೆ; ಯಾಕೆಂದರೆ, 2300 ಅಕ್ಷರಶಃವಾದ ದಿನಗಳು ಎಂಟು ವರ್ಷಕ್ಕೂ ಕಡಿಮೆಯಾಗಿದೆ. ಆದಾಗ್ಯೂ ಪ್ರವಾದನೆಯು ಪವಿತ್ರಾಲಯವನ್ನು ಹಾಳುಮಾಡಿದ ಮತ್ತು ಸತ್ಯವನ್ನು ತುಳಿದುಹಾಕಿದ ಎಲ್ಲಾ ದೀರ್ಘಕಾಲವನ್ನೂ ಆವರಿಸುತ್ತದೆ. ಪುನಃ ನಾವು ಗಮನಿಸುವುದೇನೆಂದರೆ, ಈ 2300 ದಿನಗಳು 'ಅಂತ್ಯಕಾಲ' ಎಂದು ಕರೆಯುವ ಅವಧಿಯಲ್ಲಿ ಮುಕ್ತಾಯಗೊಳ್ಳುತ್ತದೆ ಎಂದು ಮುಂತಿಳಿಸಲಾಗಿದೆ. ಯಾಕೆಂದರೆ ಗಬ್ರಿಯೇಲನು "ನರಪುತ್ರನೇ, ಇದು ಮನದಟ್ಟಾಗಿರಲಿ. ಇದು ಅಂತ್ಯಕಾಲದಲ್ಲಿ ನೆರವೇರುವ ಕನಸು" ಮತ್ತೂ "ರಹಸ್ಯಗಳನ್ನೆಲ್ಲಾ ವ್ಯಕ್ತಪಡಿಸುವಾತನು ಮುಂದಾಗುವ ಕೆಡುಕನ್ನು ತಿಳಿಸಿದ್ದಾನೆ. ಅದರ ನೆರವೇರುವಿಕೆಯು ಅಂತ್ಯಕಾಲಕ್ಕೆ ನಿಗದಿತವಾಗಿದೆ'' ಎಂದಿದ್ದಾನೆ. ಗೇಬ್ರಿಯೇಲನು ತನ್ನ ವಿವರಣೆಯಲ್ಲಿ, ಪೂರ್ಣ ದರ್ಶನವನ್ನು ಛೇದಿಸುತ್ತಾನೆ. ಭಾಗವಾಗಿ, ಸಾಂಕೇತಿಕವಾಗಿ ವಿವರಿಸುತ್ತಾ 2300 ದಿನಗಳು ಸರಿಯಾದ ಅಳತೆ ಎಂದು ಆಶ್ವಾಸಿಸುತ್ತಾನೆ. ದಾನಿಯೇಲನು ಮುಖ್ಯವಾಗಿ ಇಸ್ರಾಯೇಲ್ಯರ ಬಗ್ಗೆ ಯೋಚಿಸುತ್ತಿದ್ದನು, ಹಾಗೂ ಪಿತೃಗಳಿಗೆ ದೇವರು ಕೊಟ್ಟ ವಾಗ್ದಾನದ ನೇರವೇರಿಕೆಯನ್ನು ಹಾಗೂ ಅದು 2300 ಅಕ್ಷರಶಃದ ದಿನಗಳಲ್ಲಿ ನೆರವೇರುವುದಿಲ್ಲ ಎಂಬುದಾಗಿ ತಿಳಿದುಕೊಂಡನು. ಅದೂ ಗೇಬ್ರಿಯೇಲನು ಹೀಗೆ ಹೇಳಿದಾಗ ಪ್ರತಿಯೊಂದು ಸಾಂಕೇತಿಕ ದಿನವೂ ಎಷ್ಟೋ ದೀರ್ಘವಾಗಿದೆ ಎಂಬುದು ಅವನಿಗೆ ತಿಳಿಯದೇ ಹೋದರೂ, ಆತನಿಗೆ ಬಹಳಷ್ಟು ಕೇಡುಗಳು ದೇವಜನರ ಮೇಲೆ ಬರುತ್ತಿದ್ದುದರ ಆಲೋಚನೆಯಿಂದ ಅವನ ಹೃದಯವನ್ನು ಅಸ್ವಸ್ಥಗೊಳಿಸಲಾದರೂ, ಆತನು ಶಾರೀರಿಕ ಇಸ್ರಾಯೇಲ್ಯರಿಗಲ್ಲ 'ಬದಲಾಗಿ' ಆತ್ಮೀಕ ಇಸ್ರಾಯೇಲ್ಯರಿಗೆ ಅನ್ವಯಿಸುತ್ತದೆ ಎಂದು ಬದಲಾವಣೆಯನ್ನು ಕಂಡುಕೊಳ್ಳಲಿಲ್ಲ. "ದಾನಿಯೇಲನಾದ ನಾನು ಬೆಂಡಾಗಿ ಕೆಲವು ದಿವಸ ಕಾಯಿಲೆ ಬಿದ್ದೆನು . . ಆ ಕನಸಿಗೆ ಬೆಚ್ಚಿ ಬೆರಗಾದೆನು, ಅದು ಯಾರಿಗೂ ತಿಳಿಯಲಿಲ್ಲ" (ದಾನಿ. 8:27) ಎಂದು ನಾವು ಓದುತ್ತೇವೆ. ಒಳ್ಳೇದು, ಅದು ದಾನಿಯೇಲನಿಗೆ

ಮತ್ತು ಅಂದಿನಿಂದ ಅಂತ್ಯಕಾಲದವರೆಗಿನ ಎಲ್ಲಾ ದೇವ ಮಕ್ಕಳಿಗೆ, ಆ ಕನಸಿನಲ್ಲಿ ಕಂಡ ಗಮನಾರ್ಹ ಭೀತಿಮಯ ಮಹತ್ವವು ಪೋಪನ ಅಧಿಕಾರದ ಹಿಂಸೆ ಮತ್ತು ಸಂತರ ಕಷ್ಟಾನುಭವಗಳು ಮುಂದಾಗಿಯೇ ಸ್ಪಷ್ಟವಾಗಿ ಪ್ರಕಟವಾಗಿರಲಿಲ್ಲ. ನಮ್ಮ ಕರುಣಾಮಯನಾದ ಪರಲೋಕದ ತಂದೆಯು, ಆತನ ಜನರನ್ನು ತಾನು ವಾಗ್ದಾನ ಮಾಡಿದ ಇನ್ನೂ ಹೆಚ್ಚಿನ ನಿರಂತರವಾದ ಮಹಿಮೆಗೆ ಸಿದ್ಧಮಾಡುವಂತೆ ವೇದನೆ ಮತ್ತು ಹಿಂಸೆಗಳೆಂಬ ಬೆಂಕಿಯ ಕುಲುಮೆಯಲ್ಲಿ ರುಜುವಾತುಪಡಿಸಲು ಇಚ್ಛೆಯುಳ್ಳವನಾಗಿದ್ದರೂ, ನಮ್ಮೊಡನೆ "ಆ ಹೊತ್ತಿನ ಕಾಟ ಆ ಹೊತ್ತಿಗೇ ಸಾಕು" ಎಂಬಂತೆ ವ್ಯವಹರಿಸುತ್ತಾನೆ.

ದಾನಿಯೇಲನು ಪರ್ಷಿಯನ್ "ಟಗರು" ಅಥವಾ ಗ್ರೀಕರ "ಮೇಕೆ"ಗಿಂತಲೂ ಹೆಚ್ಚಾಗಿ ಇಸ್ರಾಯೇಲ್ಯರ ಮೇಲೆ ಆಸಕ್ತಿಯುಳ್ಳವನಾಗಿದ್ದು, ಯೆರೆಮೀಯನ ಪ್ರವಾದನೆಯಂತೆ ಇಸ್ರಾಯೇಲ್ಯರು ಅವರ ಪಾಪಗಳಿಗಾಗಿ ಅವರು ಬಾಬೇಲಿನಲ್ಲಿ ಎಪ್ಪತ್ತು ವರ್ಷಗಳ ಗುಲಾಮತನದ ಶಿಕ್ಷೆಯನ್ನು ಅನುಭವಿಸಬೇಕಾಗುವುದೆಂದು ಬಲ್ಲವನಾಗಿದ್ದನು. ಹೀಗಾಗಿ, ಆತನು ಈಗ ತನ್ನ ಕನಸಿನ ಮೂಲಕವಾಗಿ ಬರಲಿರುವ ತೊಂದರೆಗಳನ್ನು (ಆತನು ನಿರೀಕ್ಷಿಸಿದ್ದ ಉನ್ನತಿ ಮತ್ತು ಮಹಿಮೆಯ ಬದಲಾಗಿ) ನಿರ್ಣಯಿಸಿದನು. ಮತ್ತು ಅದು ಇಸ್ರಾಯೇಲ್ಯರ ಪಾಪ ಮತ್ತು ದೇವರ ಕ್ರೋಧವನ್ನು ಸಂಕೇತಿಸುವುದಾಗಿತ್ತು; ಆದುದರಿಂದ ಆತನು ಇಸ್ರಾಯೇಲ್ಯರ ಪಾಪಗಳನ್ನು ಕ್ಷಮಿಸುವಂತೆಯೂ, ಅವರ ಪಿತೃಗಳಿಗೆ ಮಾಡಿದ ವಾಗ್ದಾನಗಳನ್ನು ನೆರವೇರಿಸಬೇಕೆಂತಲೂ ನಿಷ್ಠಾಪೂರ್ವಕವಾಗಿ ಪ್ರಾರ್ಥಿಸಿದನು. ಇದನ್ನು ದಾನಿಯೇಲ 9:2–19ರವರೆಗೆ ಕೆಲವೇ ಮಾತುಗಳಲ್ಲಿ ಹೇಳಲಾಗಿದೆ. ದಾನಿಯೇಲನು ದೈವಿಕ ಯೋಜನೆಯ ವ್ಯಾಪ್ತಿಯನ್ನು ನಮಗೆ ಈಗ ಕಂಡುಬಂದಂತೆ ಆಗ ಆತನಿಗೆ ಕಾಣಲಿಲ್ಲ. ಪರಂತು, ವಾಗ್ದಾನಗಳಲ್ಲಿರುವಂತೆ ಆತನ ನಂಬಿಕೆ ಮತ್ತು ಆತನ ನಿಷ್ಠಾವಂತಿಕೆಗಳು ದೇವರಿಗೆ ಇಷ್ಟವಾದವು. ಹೀಗಾಗಿ ದೇವರು ಈ ಕನಸಿನ ವಿಷಯವಾಗಿ ಇನ್ನೂ ಹೆಚ್ಚಿನದನ್ನು ಅಥವಾ ವಿಸ್ತಾರವಾದ ವಿವರಣೆಯನ್ನು ಆತನಿಗೆ ತಿಳಿಯಪಡಿಸಿದನು ಮತ್ತು ಆ ಲಕ್ಷಣಗಳಲ್ಲಿ ಅವು ಶಾರೀರಿಕ ಇಸ್ರಾಯೇಲ್ಯರಿಗೆ ವಿಶೇಷವಾಗಿ ಅನ್ವಯಿಸುವುದಾಗಿದ್ದವು. ಇಸ್ರಾಯೇಲಿನ ಜನರು ಬಾಬೇಲಿನಲ್ಲಿರುವಾಗ ಆ ಎಪ್ಪತ್ತು ವರ್ಷಗಳ ಪಾಳುಬೀಳುವಿಕೆಯು ಆ ರೀತಿಯಲ್ಲಿ ಹೆಚ್ಚು (2300 ದಿನಗಳವರೆಗೆ) ಮುಂದುವರಿಸಲ್ಪಡುತ್ತದೆ ಎಂದು ಆತನು ಭಾವಿಸಿದನು. ದೇವರು ಗೆಬ್ರಿಯೇಲ ದೂತನನ್ನು ಅವನ ಬಳಿಗೆ ಕಳುಹಿಸುವುದರ ಮೂಲಕ ಈ ತಪ್ಪನ್ನು ಸರಿಪಡಿಸಿದನು ಮತ್ತು ಈ ಎಪ್ಪತ್ತು ವರ್ಷಗಳು ಮುಗಿಯುವಾಗ ದಾಸತ್ವವೂ ಮುಗಿಯುತ್ತದೆಂದೂ, ತೊಂದರೆಯ ಸಮಯ ಮುಂತಾದವುಗಳು ಎದುರಾದರೂ ಯೆರೂಸಲೇಮ್ ನಗರವನ್ನು ಮತ್ತು ದೇವಾಲಯವನ್ನು ಪುನಃನಿರ್ಮಾಣಗೊಳಿಸಲಾಗುವುದು ಎಂದು ಆತನಿಗೆ ತಿಳಿಸಿದನು.

ದಾನಿಯೇಲನು ತಾನು ಬಾಬೇಲಿನ ಗುಲಾಮತ್ವದ 70 ವರ್ಷಗಳು ಮುಂದಕ್ಕೆ ಹಾಕಲ್ಪಡುತ್ತದೆಂದು ತಪ್ಪಾಗಿ ಅರ್ಥಮಾಡಿಕೊಂಡಿದ್ದ 2300 ದಿನಗಳ ಕುರಿತಾದ ಈ ಕನಸಿನ ಬಗ್ಗೆ ಪ್ರಾರ್ಥಿಸುತ್ತಿರಲು, ದೇವರು ದಾನಿಯೇಲನ ಬಳಿಗೆ ವಿವರಣೆ ನೀಡುವಂತೆ ಗೆಬ್ರಿಯೇಲ ದೂತನನ್ನು ಕಳುಹಿಸಿದನು (ದಾನಿ. 9:21–27). ಆತನು ದಾನಿಯೇಲನಿಗೆ –

"ನೀನು ದೇವರಿಗೆ ಅತಿಪ್ರಿಯ; ಈ ದೈವೋಕ್ತಿಯನ್ನು ಯೋಚಿಸು, ಈ ದರ್ಶನವನ್ನು ಗ್ರಹಿಸಿಕೋ, ಅಧರ್ಮವನ್ನು ಕೊನೆಗಾಣಿಸುವುದು, ಪಾಪಗಳನ್ನು ತೀರಿಸುವುದು, ಅಪರಾಧವನ್ನು ನಿವಾರಿಸುವುದು, ಸನಾತನ ಧರ್ಮವನ್ನು ಸ್ಥಾಪಿಸುವುದು, ಕನಸನ್ನೂ. ಪ್ರವಾದಿಯ ನುಡಿಯನ್ನೂ ಮುದ್ರೆಹಾಕಿ ಯಥಾರ್ಥಮಾಡುವುದು, ಅತಿಪರಿಶುದ್ಧವಾದುದ್ದನ್ನು ಅಭಿಷೇಕಿಸುವುದು, ಇವೆಲ್ಲಾ ನೆರವೇರುವುದಕ್ಕೆ ಮೊದಲು ನಿನ್ನ ಜನಕ್ಕೂ (ಇಸ್ರಾಯೇಲ್ಯರಿಗೂ), ನಿನ್ನ ಪರಿಶುದ್ಧಪುರಕ್ಕೂ (ಯೆರೂಸಲೇಮಿಗೂ) ಎಪ್ಪತ್ತುವಾರಗಳು [70x7=490 ದಿನಗಳು] ಕಳೆಯಬೇಕೆಂದು (ಅಥವಾ ಪ್ರತ್ಯೇಕಿಸಲ್ಪಡುವುದು, ಸ್ಥಿರಪಡಿಸಲ್ಪಡುವುದು ಅಥವಾ ನಿರ್ಣಯಿಸಲ್ಪಡುವುದು] ನಿಷ್ಕರ್ಷೆಯಾಗಿದೆ" ಎಂಬಿತ್ಯಾದಿಯಾಗಿ ತಿಳಿಸಿದನು*

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಆ ಸಾಂಕೇತಿಕ ಎಪ್ಪತ್ತು ವಾರಗಳ ಅಥವಾ ಆ 490 ದಿನಗಳು 2300 ದಿನಗಳ ಒಂದು ಭಾಗವಾಗಿದೆ ಎಂಬುದು ಈ ಭಾಗವು ಇಸ್ರಾಯೇಲನ್ನು ಬಾಬೇಲಿನಿಂದ ಪೂರ್ವಸ್ಥಿತಿಗೆ ತರುವ ಬಗ್ಗೆ ದಾನಿಯೇಲನ ಪ್ರಾರ್ಥನೆಗೆ ಉತ್ತರವಾಗಿ ವಿಶೇಷ ಆಸಕ್ತಿಯ ಗುರುತಾಗಿದೆ. (ವ. 12, 16–18). ಈ ಎಪ್ಪತ್ತು ವಾರಗಳು ಅಥವಾ 490 ದಿನಗಳು 2300 ದಿನಗಳ ಒಂದು ಭಾಗವಾಗಿತ್ತು, ಅದರ ನೆರವೇರಿಕೆಯು 2300 ದಿನಗಳು ಯಾವಾಗ ಪ್ರಾರಂಭವಾಗುವುದೆಂದು

* ಈ ಪ್ರವಾದನೆಯನ್ನು ಪರಿಶೀಲನೆ ಮಾಡಲು 2ನೇ ಸಂಪುಟದ 63ನೇ ಪುಟ ಇಂಗ್ಲೀಷ್‌ನಲ್ಲಿ ನೋಡಿ. ಕನ್ನಡದಲ್ಲಿ – 31ನೇ ಪುಟ ಅಂದರೆ 3ನೇ ಅಧ್ಯಾಯ ನೋಡಿ

ತೋರಿಸುವುದಲ್ಲದೆ, ಯಾವ ರೀತಿಯ ಸಮಯವು (ಅಕ್ಷರಶಃ ಅಥವಾ ಸಾಂಕೇತಿಕ) ಸೂಚಿತವಾಗಿದೆ ಎಂಬುದನ್ನೂ ತೋರಿಸುತ್ತದೆ (1 ಪೇತ್ರ 1:11 ನೋಡಿರಿ). ಇದಕ್ಕೂ ಹೆಚ್ಚಾಗಿ, ಎಪ್ಪತ್ತು ವಾರಗಳ ಪ್ರವಾದನೆಯ ನೆರವೇರಿಕೆಯು ದಾನಿಯೇಲನ ಮೇಲೆ ನಿಜವಾದ ಪ್ರವಾದಿಯೆಂಬ ಮುದ್ರೆಯನ್ನು ಆತನ ಎಲ್ಲಾ ಪ್ರವಾದನೆಗಳ ಮೇಲೆ ಹಾಕುತ್ತದೆ ಮತ್ತು ವಿಶೇಷವಾಗಿ ಇದು 2300 ದಿನಗಳ ದರ್ಶನಕ್ಕೆ ಮುದ್ರೆ ಹಾಕುವುದಾಗಿದೆ. ಆದುದರಿಂದ, ಈ ಎಪ್ಪತ್ತು ವಾರಗಳು, ಬೇರೆ ಸಂಗತಿಗಳೊಂದಿಗೆ ದರ್ಶನ ಮತ್ತು ಪ್ರವಾದಿಯ ಮೇಲೆ ಮುದ್ರೆ ಹಾಕಲು ಉಪಯೋಗವಾಗುತ್ತದೆ.

ಹೀಗೆ, ಆ ಸಾಂಕೇತಿಕ 70 ವಾರಗಳು ಅಥವಾ 490 ದಿನಗಳನ್ನು ವರ್ಷಗಳಲ್ಲಿ 2300 ದಿನಗಳ ಮೊದಲಿನ ಭಾಗವಾಗಿ ನೆರವೇರಿತೆಂಬುದನ್ನು ಮತ್ತು ಪೂರ್ಣ ದರ್ಶನದ ದೇವರ ಗುರುತೆಂಬುದಾಗಿ ಗ್ರಹಿಸಿಕೊಂಡು ನಾವು ಎಲ್ಲಿ ಪೂರ್ಣಾವಧಿಯು ಸಂಪೂರ್ಣಗೊಳ್ಳುತ್ತದೆ ಎಂಬ ಅಳತೆಯನ್ನು ಪ್ರಾರಂಭಿಸುತ್ತೇವೆ. 2300 ದಿನಗಳಿಂದ ಮೊದಲನೆ ಆಗಮನದಲ್ಲಿನ 490 ದಿನಗಳನ್ನು ಕಳೆದು ಹೀಗೆ, ಆಗ ಸಾಂಕೇತಿಕ 70 ವಾರಗಳು ಅಥವಾ 490 ದಿನಗಳನ್ನು ವರ್ಷಗಳಲ್ಲಿ 2300 ದಿನಗಳ ಮೊದಲಿನ ಭಾಗವಾಗಿ ನೆರವೇರಿತೆಂಬುದನ್ನು ಮತ್ತು ಪೂರ್ಣದರ್ಶನದ ದೇವರ ಗುರುತೆಂಬುದಾಗಿ ಗ್ರಹಿಸಿಕೊಂಡು ನಾವು ಪೂರ್ಣ ಅವಧಿಯು ಸಂಪೂರ್ಣಗೊಳ್ಳುತ್ತದೆಂಬ ಅಳತೆಯಲ್ಲಿ ಪ್ರಾರಂಭಿಸುತ್ತೇವೆ. 2300 ದಿನಗಳಿಂದ ಮೊದಲನೆ ಆಗಮನದಲ್ಲಿನ 490 ದಿನಗಳನ್ನು ಕಳೆದು ನಮಗೆ 1810 ದಿನಗಳು ಉಳಿಯುತ್ತವೆ. ನಂತರದಲ್ಲಿ, ಈ 1810 ವರ್ಷಗಳನ್ನು (ಪ್ರವಾದನೀಯ, ಸಾಂಕೇತಿಕ ವರ್ಷಗಳು) ಪವಿತ್ರ ವರ್ಗವು ಪೋಪನ ಅಧಿಕಾರದ ವಿವಿಧ ಕಲುಷಿತಗಳಿಂದ ಶುದ್ಧೀಕರಿಸಲ್ಪಡುವ ಕಾಲವನ್ನು ಅಳೆಯಬಹುದು. ಅಸಹ್ಯಕರವಾದ ಹಾಳುಮಾಡುವ ವಸ್ತುವು ಬಹಳಷ್ಟು ಶತಮಾನಗಳವರೆಗೆ ದೇವರ ಆಲಯವನ್ನು ಕಲುಷಿತಗೊಳಿಸಿತ್ತು.

ಮೆಸ್ಸೀಯನ ಮರಣ, ತೋರ್ಪಡಿಸುವಂತೆ, ಕ್ರಿ.ಶ. 33ರಲ್ಲಿ ಉಂಟಾಯಿತು (ಸಂಪುಟ II., 68 ನೋಡಿರಿ, ಕನ್ನಡದಲ್ಲಿ 34ನೇ ಪುಟ ನೋಡಿರಿ). ಇದು ಎಪ್ಪತ್ತರ ಕಡೆಯ ವಾರದ ಮಧ್ಯೆ ಅಥವಾ ನಡುವೆ ನಡೆಯಿತು. ಆದುದರಿಂದ, ಇದರ ಪೂರ್ಣ ಅಂತ್ಯವು ಅರ್ಧ ವಾರ ಅಥವಾ ಮೂರುವರೆ ವರ್ಷಗಳ ನಂತರವಾಗಿದೆ. ಅಂದರೆ ಕ್ರಿ.ಶ. 36ರ ಶರತ್ಕಾಲದಲ್ಲಿ. ಆದುದರಿಂದ, ಕ್ರಿ.ಶ. 36ರ ಶರತ್ಕಾಲದಿಂದ 1810 ವರ್ಷಗಳು ಅಂದರೆ 1846ರ ಶರದೃತುವು 2300 ದಿನಗಳ ದರ್ಶನವನ್ನು ಗುರುತಿಸುತ್ತದೆ. ಮತ್ತು ಇದು ಪವಿತ್ರಾಲಯವು ಶುದ್ಧೀಕರಿಸಲ್ಪಡುವ ಉಚಿತ ಕಾಲವಾಗಿದೆ.

ಈ ಪ್ರವಾದನೆಯು ಈಡೇರುತ್ತಿರುವಾಗ, ನಾವು ಇದರಲ್ಲಿ ಇತರೆ ನೆರವೇರಿದ ಪ್ರವಾದನೆಗಳ ಪ್ರಕರಣಗಳ ನೆರವೇರಿಕೆಯು ಇತಿಹಾಸದ ಪುಟಗಳಲ್ಲಿ ಸೇರಿರುವಂತೆ ಈ ಸತ್ಯವನ್ನೂ ಕಂಡುಕೊಳ್ಳಲು ನಿರೀಕ್ಷಿಸಬಹುದು. ಇತಿಹಾಸಕಾರರು ಕೆಲವೊಮ್ಮೆ ಸತ್ಯವೇದವನ್ನೂ, ಸತ್ಯವೇದದ ದೇವರನ್ನೂ ನಂಬದೇ ಇರುವವ ರಾಗಿದ್ದರೂ, ದೇವರು ಅವರ ಕಾರ್ಯಗಳನ್ನು ರದ್ದುಪಡಿಸಿದ್ದಾನೆಂಬುದು ಅವರಿಗೆ ತಿಳಿಯದು. ಹೀಗಾಗಿ ಎಲ್ಲಿ ಪ್ರವಾದನೆಗಳು ನೆರವೇರುವುವೋ ಅಲ್ಲಿ ಸತ್ಯಗಳು ಯಾವಾಗಲೂ ನಿಚ್ಚಳವಾಗಿ ಒಳ್ಳೆಯ ಮತ್ತು ವಿಶ್ವಾಸಾರ್ಹ ಪ್ರಮಾಣವಾಗಿ ಇತಿಹಾಸವನ್ನು ಸೇರಿಕೊಳ್ಳುತ್ತದೆ. ಪವಿತ್ರಾಲಯವನ್ನು ಶುದ್ಧೀಕರಿಸುವ ಈ ಪ್ರಕರಣದಲ್ಲಿಯೂ ಅದರಂತೆಯೇ ಆಗಿದೆ.

ನಾವು ಎಲ್ಲಾ ಆಧುನಿಕ ಇತಿಹಾಸಕಾರರ ಅಧಿಕಾರದಲ್ಲಿ ಅವರು ಮಹಾಸುಧಾರಣೆ ಎಂದು ಕರೆಯುವುದು ಹದಿನಾರನೆಯ ಶತಮಾನ ಆಗಿತ್ತೆಂದು ತಿಳುಕೊಳ್ಳುತ್ತೇವೆ, ಆದರೆ ರೋಮನ್ ಕೈಥೋಲಿಕ್ ಬರಹಗಾರರನ್ನು ಹೊರತುಪಡಿಸಿ ಅವರು ಇದನ್ನು ಮಹಾ ದೇಶದ್ರೋಹದ ಕಾಲವೆಂದು ಹೇಳುತ್ತಾರೆ, ಈ ಸುಧಾರಣಾ ಚಳುವಳಿಯೊಂದಿಗೆ, ಪವಿತ್ರಾಲಯದ ಶುದ್ಧೀಕರಣವನ್ನು ಪ್ರಾರಂಭದ ದಿನಗಳೆಂದು ಹೇಳಬಹುದು. ಪವಿತ್ರಾಲಯವು ಅನೇಕ ತಪ್ಪುಗಳಿಂದ ಮತ್ತು ಅದಕ್ಕೆ ಅನುಗುಣವಾದ ಧೋರಣೆಗಳಿಂದ ಮಲೀನವಾಯಿತೆಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಇವುಗಳ ಉತ್ತುಂಗವು 'ಮಾಸ್'ನ್ನು ಪರಿಚಯಿಸು ವುದರಲ್ಲಿ ತಲುಪಿತು ಮತ್ತು ಈ ತಪ್ಪುಗಳು ಎದ್ದಾಗ ಒಂದು ದೊಡ್ಡ ಗುಂಪಿನವರ (ನಾಮಾಂಕಿತ ಕ್ರೈಸ್ತ ಸಭೆಯ ಸಮೂಹದವರ) ಅತ್ಯಂತ ಆಳವಾದ ಕಳಂಕವು ಅನುಸರಿಸಿತು. ತೃಪ್ತಿಪಡಿಸುವಿಕೆಯ ನಾಚಿಕೆಯಿಲ್ಲದ ವ್ಯಾಪಾರವು ಉತ್ತುಂಗಕ್ಕೇರಿ ಸುಧಾರಣಾ ಚಳುವಳಿಯನ್ನು ಸಾಕಷ್ಟು ಮಟ್ಟಿಗೆ ಕೆರಳಿಸಿತು. ಪವಿತ್ರಾಲಯದ ವರ್ಗದವರು ಸಹ ಒಂದು ಮಟ್ಟದಲ್ಲಿ ಕಲುಷಿತರಾದರೂ, ಅಂದರೆ ಈ ತಪ್ಪಿಗೆ ಮೋಸ ಹೋದರೂ, ಭಯಾನಕ ಪರಿಣಾಮಗಳಿಂದ ಅವರ ಕಣ್ಣುಗಳು ತೆರೆಯಲ್ಪಟ್ಟವು. ಮತ್ತು ಅದೇ ಪ್ರಕಾರವಾಗಿ, ನಾವು ಮಹಾಸುಧಾರಣೆಯ ಪ್ರಮುಖ ಟಿಪ್ಪಣಿಯು "ಯೇಸುವಿನ ನಿರಂತರವಾದ ತ್ಯಾಗದಲ್ಲಿನ ವಿಶ್ವಾಸದ ಸಮರ್ಥನೆ ಎಂಬುದಕ್ಕೆ ಪುನರಾವರ್ತನೆಯಿಲ್ಲ

(repetition) ಮತ್ತು ಕ್ರಿಸ್ತ ವಿರೋಧಿಯ ಕಲುಷಿತವಾದ ಬಲಿಪೀಠದಲ್ಲಿ ಪ್ರಾಯಶ್ಚಿತ್ತ ಮತ್ತು ಮಾಸ್‌ಗಳ ಮೂಲಕ ಕ್ಷಮಾಪಣೆ ದೊರೆಯುತ್ತದೆ'' ಎಂಬುದನ್ನು ವಿರೋಧಿಸುತ್ತದೆ ಎಂದು ನೋಡುತ್ತೇವೆ.

ಈ ಸುಧಾರಣೆಯು ಪ್ರಾರಂಭವಾಗುವುದಕ್ಕೆ ನಿರಂತರವಾದ ವಿಶ್ವಾಸದಿಂದ ಸಮರ್ಥನೆ (ಶುದ್ಧೀಕರಣ) ಎಂಬ ಬುನಾದಿಯು ಸರಿಯಾದ ಸ್ಥಳವಾಗಿತ್ತು; ಆದಾಗ್ಯೂ, ಪ್ರವಾದನೆಯು ಸಮೂಹದವರ ಶುದ್ಧೀಕರಣವನ್ನು ಸೂಚಿಸುವುದಿಲ್ಲ, ಆದರೆ ಪವಿತ್ರಾಲಯ ವರ್ಗದವರ ಶುದ್ಧೀಕರಣವನ್ನು ಮಾತ್ರವೇ ಸೂಚಿಸುತ್ತದೆ ಎಂಬುದನ್ನು ಗಮನಿಸಿರಿ. ದೊಡ್ಡಗುಂಪಿನವರು ಶುದ್ಧೀಕರಣ ಹೊಂದಿಕೊಳ್ಳಲಿಲ್ಲ ಅಥವಾ ಗುಂಪಿನವರು ಶುದ್ಧಿ ಹೊಂದಲಿಲ್ಲ. ಅವರು ಇನ್ನೂ ತಮ್ಮ ತಪ್ಪುಗಳನ್ನು ಉಳಿಸಿಕೊಂಡರು ಮತ್ತು ಅದನ್ನು ಈ ದಿನದವರೆಗೂ ಮಾಡುತ್ತಿದ್ದಾರೆ; ಆದರೆ ಪ್ರತಿಷ್ಠೆ ಹೊಂದಿದ ವರ್ಗದವರು, ಅಂದರೆ ಪವಿತ್ರಾಲಯದವರು ತಪ್ಪನ್ನು ನಿರಾಕರಿಸಿದರು ಮತ್ತು ಸತ್ಯದ ಸಲುವಾಗಿ ಕೆಲವರು ಮರಣದಪರ್ಯಂತ ಅನೇಕ ಸಂಕಷ್ಟಗಳನ್ನು ಅನುಭವಿಸಿದರು.

ಆದರೆ ಇದು ಶುದ್ಧೀಕರಣ ಪ್ರಕ್ರಿಯೆಯ ಪ್ರಾರಂಭವು ಮಾತ್ರ; ಈಗ ಎಚ್ಚರಗೊಂಡ ಈ ವರ್ಗವು ಪೋಪನ ಅಧಿಕಾರವು ಅಭ್ಯಾಸಮಾಡಿ ಅಭಿವೃದ್ಧಿ ಹೊಂದುತ್ತಿರುವಾಗ ಕಳಂಕಿತ ತಪ್ಪುಗಳು ಹೆಚ್ಚುತ್ತಲೇ ಹೋಗುತ್ತಿವೆ ಎಂಬುದನ್ನು ಬಲುಬೇಗ ಕಂಡುಕೊಂಡಿದೆ. ಸುಧಾರಣೆಯ ಚೈತನ್ಯಶಾಲಿ ನಾಯಕನಾದ ಲೂಥರನು ಒಂದು ತಪ್ಪಿಗೆ ನಿಲ್ಲಿಸಲಿಲ್ಲ, ಅನೇಕ ತಪ್ಪುಗಳನ್ನು ಎಸಗುವ ಪ್ರಯತ್ನ ಮಾಡಿದನು ಮತ್ತು 31ನೇ ಅಕ್ಟೋಬರು 1517ರಂದು ಪೋಪನ ಅಧಿಕಾರಕ್ಕೆ ವಿರೋಧವಾದ ತೊಂಭತ್ತೈದು ತಪ್ಪುಗಳನ್ನು ತೋರಿಸುವ ಪ್ರಬಂಧಗಳನ್ನು ಬರೆದು ಅವುಗಳನ್ನು Wittenberg ದೇವಾಲಯದ ಹೆಬ್ಬಾಗಿಲಿಗೆ ಮೊಳೆಗಳಿಂದ ಬಡಿದನು. ಅವೆಲ್ಲವುಗಳು ಪೋಪನ ಅಧಿಕಾರದ (Papacy) ಸಿದ್ಧಾಂತಗಳನ್ನು ವಿರೋಧಿಸುವದಾಗಿತ್ತು. ಅದರಲ್ಲಿ 27ನೆಯ ಪ್ರಬಂಧವು ಮಾನವನು ಅಮರತ್ವವನ್ನು ಸ್ವಾಭಾವಿಕವಾಗಿ (inherent) ಹೊಂದಿರುತ್ತಾನೆ ಎಂಬುದನ್ನು ನಿರಾಕರಿಸುವುದಾಗಿತ್ತು. ಈ ಪ್ರಸ್ತಾಪಗಳನ್ನು ನಾಸ್ತಿಕತೆಯುಳ್ಳವುಗಳೆಂದು ಪೋಪ್ ಲಿಯೋ X ಎಂಬಾತನು ಕ್ರಿ.ಶ. 1520ರಲ್ಲಿ ತನ್ನ ಉತ್ತರದಲ್ಲಿ ಅಳೆಯಲಾಗದ ಶಬ್ದಗಳಿಂದ ಖಂಡಿಸಿ ಅವುಗಳು ಪರಿವರ್ತನೆಯ ಸಿದ್ಧಾಂತಗಳೆಂದೂ (Transubstantiation), ಮಾನವನು ಅಮರತ್ವ ವುಳ್ಳವನು ಎಂಬ ಮಾನವನ ದುರಾಚಾರ ವುಳ್ಳದೆಂದು ನಿರಾಕರಿಸಿದನು. ಮತ್ತು ಪೋಪನು ತಾನು ಈ ಲೋಕದ ಚಕ್ರವರ್ತಿ ಮತ್ತು ಪರಲೋಕದ ಅರಸನಾಗಿದ್ದೇನೆ, ಭೂಲೋಕದಲ್ಲಿನ ದೇವರಾಗಿದ್ದೇನೆ ಎಂಬ ಹಕ್ಕೇಳಿಕೆಯನ್ನೂ ನೀಡಿದನು ಮತ್ತು ಅವುಗಳನ್ನು "ರೋಮಿನ ತಿಪ್ಪೆ ಗುಡ್ಡದಲ್ಲಿ ಕಂಡುಬರುವ ದೈತ್ಯಾಕಾರದ ಶಾಸನಕ್ಕೆ ಸಂಬಂಧಿಸಿ("monstrous opinions to be found in the Roman Dunghill of decretals") ದ ಅಭಿಪ್ರಾಯಗಳು" ಎಂಬುದಾಗಿ ಉಲ್ಲೇಖಿಸಿದನು .

ಆದರೆ, ಅಯ್ಯೋ! ಎಷ್ಟೋ ಉದಾತ್ತವಾಗಿ ಮತ್ತು ಧೈರ್ಯಪೂರ್ವಕವಾಗಿ ಪ್ರಾರಂಭವಾದ ಶುದ್ಧೀಕರಣ ಕಾರ್ಯವು ಜನಪ್ರಿಯವಾಗಲು ಬಹಳಷ್ಟು ಮೂಲ ಸ್ವರೂಪವುಳ್ಳದ್ದಾಗಿತ್ತು. ಮತ್ತು ಲೂಥರನ ಸ್ನೇಹಿತರು ಮತ್ತು ಮೆಚ್ಚುಗೆದಾರರು ಮತ್ತು ಆತನ ಸಹವಾಸಿಗಳು ಒಂದು ಮಟ್ಟಕ್ಕೆ ಜಯವನ್ನು ಸಂಪಾದಿಸಿದರು. ಅವರನ್ನು ಕಾರ್ಯಕುಶಲತೆ, ದೂರದೃಷ್ಟಿ, ಮಿಥ್ಯಾ ಪ್ರಶಂಸೆಗಳು, ಸಹಾಯದ ವಾಗ್ದಾನ ಮತ್ತು ಜಯ ಮುಂತಾದ ಅತಿಯಾದ ಶಕ್ತಿಗಳನ್ನು ತುಂಬಿಸಿತು ಮತ್ತು ಅವರ ಮಾರ್ಗವು ಈ ಲೋಕದ ವಿವೇಕಕ್ಕನುಸಾರವಾಗಿ ರೂಪುಗೊಂಡಿತು (ದಾನಿ. 11:34,35). ಅನೇಕ ಜರ್ಮನಿ ಪ್ರಭುಗಳು ಈ ಧೈರ್ಯಶಾಲಿ ಸುಧಾರಕರುಗಳಲ್ಲಿ ಆಕ್ರಮಣಮಾಡುವ ತಿಳುವಳಿಕೆ ಮತ್ತು ಎದೆಗಾರಿಕೆ ಯುಂಟೆಂಬುದನ್ನು ತಿಳಿದು ಅವರ ಭಾವೋದ್ದೀಪಿತ ಮೆಚ್ಚುಗೆದಾರರಾದರು. ಈ ಹಿಂದೆ ಶತಮಾನಗಳವರೆಗೆ ಆ ಅರಸರುಗಳ ಅಧಿಕಾರಕ್ಕೆ ಇವರು ಹೆದರಿ ನಡುಗುವವರಾಗಿದ್ದರು. ಈ ಪ್ರಭುಗಳು (princes) ಸುಧಾರಕರಿಗೆ ಸಹಾಯಮಾಡಿದರು ಮತ್ತು ಅವರ ಈ ಸಹಾಯವು ಅವರಿಗೆ ತಮ್ಮ ಚಳುವಳಿಕೆಯ ಜಯಕ್ಕೆ ಅತ್ಯವಶ್ಯವಾದದ್ದೆಂದು ತೋರಿಬಂತು, ಈ ಸಹಾಯಕ್ಕೆ ಬದಲಾಗಿ ಅವರುಗಳು ಅವರುಗಳ ಅರಸುತನದ ಹಕ್ಕುದಾರಿಕೆಯನ್ನು ಸುಧಾರಕರುಗಳಿಂದ ಪಡಕೊಂಡರು (?).

ಈ ಸುಧಾರಣೆಯು ಧಾರ್ಮಿಕ ನಿರಂಕುಶಾಧಿ ಕಾರದ ಮೇಲಿನ ದಂಗೆ ಮಾತ್ರವಾಗಿರದೆ, ರಾಜಕೀಯ ನಿರಂಕುಶಾಧಿಕಾರದ ಮೇಲಿನ ದಂಗೆಯೂ ಸಹ ಆಗಿತ್ತೆಂಬುದನ್ನು ನಾವು ಮರೆಯಬಾರದು. ಮತ್ತು ಸುಧಾರಣೆಯ ಎರಡು ವರ್ಗದವರನ್ನು ಹೆಚ್ಚು ಕಡಿಮೆ

ಸಹಾನುಭೂತಿ ಮತ್ತು ಸಹಕಾರಕ್ಕೆ ತರಲಾಯಿತು. ಈ ಸುಧಾರಣಾ ಯುಗದ ಬಗ್ಗೆ ಪ್ರೊ॥ ಫಿಷರ್* ಎಂಬುವವರು ಹೇಳುವುದೇನೆಂದರೆ :–

**ಸ್ವಿಜರ್‌ಲ್ಯಾಂಡಿನ ಬಗ್ಗೆ:** "ಒಬ್ಬ ಕ್ರೈಸ್ತ ಸಭೆಯ ಸುಧಾರಕನಾಗಿ Zwingliಯ ಪರಿಶ್ರಮವು ಸ್ವಿಜರ್‌ಲ್ಯಾಂಡಿನ ನೀತಿ ಮತ್ತು ರಾಜಕೀಯ ಪುನರ್‌ಸಂಘಟನೆಗಾಗಿರುವ ಆತನ ರಾಷ್ಟ್ರಭಕ್ತಿ ಉತ್ಸಾಹದೊಡನೆ ಬೆರೆತುಹೋಗಿತ್ತು".

**ಜಾನ್ ಕ್ಯಾಲ್ವಿನ್ನನ ಕಾಲ ಮತ್ತು ಜಿನೀವ ಸರ್ಕಾರದ ಬಗ್ಗೆ:** "ಧರ್ಮೋಪದೇಶಕ ಕ್ರಾಂತಿಯು ನಾಗರೀಕವನ್ನು ಅನುಸರಿಸಿತು. ಪ್ರೋತಸ್ತಾಂತ ಧರ್ಮವು ಕಾನೂನಾತ್ಮಕವಾಗಿ (1535ರಲ್ಲಿ) ಸ್ಥಾಪಿತವಾಯಿತು. ಕಾಲ್ವಿನ್ನನು ವಾಸ್ತವಿಕವಾಗಿ ಆ ನಗರದ ನ್ಯಾಯ ನೀಡುವವನಾದನು. ಅದೊಂದು ಧರ್ಮೋಪದೇಶಕರ ರಾಜ್ಯವಾಗಿತ್ತು".

**ಸ್ಕಾಂಡಿನೇವಿಯಾದ ಬಗ್ಗೆ:** "ಸ್ಕಾಂಡಿನೇವಿಯಾದ ದೇಶಗಳಲ್ಲಿ ಚಕ್ರಾಧಿಪತಿಯು ಅಧಿಕಾರವನ್ನು ಸುಧಾರಣೆಯ ಮೂಲಕ ಕಟ್ಟಲಾಯಿತು".

**ಡೆನ್ಮಾರ್ಕ್ ಬಗ್ಗೆ:** "ನೂತನ (ಪ್ರೊತಸ್ತಾಂತ) ಸಿದ್ಧಾಂತವು ದೇಶಕ್ಕೆ ಬಂದಿದ್ದು ಅದು ವ್ಯಾಪಿಸುತ್ತಿತ್ತು. ದೇವಾಲಯದ (ಕ್ಯಥೋಲಿಕ್) ಸೊತ್ತುಗಳನ್ನು ಬಯಸುತಿದ್ದ ಗಣ್ಯರು ಅದನ್ನು ಸಮರ್ಥಿಸಿಕೊಂಡರು".

**ಸ್ವೀಡನ್ ಬಗ್ಗೆ:** "ಒಂದು ಮಹಾ ರಾಜಕೀಯ ಕ್ರಾಂತಿಯು ಕಾಣಿಸಿಕೊಂಡಿತು ಮತ್ತು ಅದರಲ್ಲಿ ಧಾರ್ಮಿಕ ಕ್ರಾಂತಿಯೂ ಒಳಗೊಂಡಿತ್ತು".

**ಜರ್ಮನಿಯ ಬಗ್ಗೆ:** "ಪ್ರೊತಸ್ತಾಂತ ಅರಸರ ವಿರುದ್ಧವಾದ ಬೆದರಿಕೆಯು ಪರಸ್ಪರ ರಕ್ಷಣೆಗಾಗಿ 'League of Smalcald' ಎಂಬುದನ್ನು ಸ್ಥಾಪಿಸಿಕೊಳ್ಳಲು ಪ್ರೇರೇಪಿಸಿತು. ಲೂಥರರುಗಳ ಮೇಲೆ ಯಾವುದೇ ದಮನಕಾರಿ ಕ್ರಮಗಳನ್ನು ತೆಗೆದುಕೊಳ್ಳಲು ಅಸಾಧ್ಯವಾಯಿತು. 1555ರ "Diet of Augsburg"ನಲ್ಲಿ ಧಾರ್ಮಿಕ ಶಾಂತಿಯನ್ನು ನಿರ್ಧರಿಸಲಾಯಿತು. ಪ್ರತಿಯೊಬ್ಬ ಅರಸನೂ ಕ್ಯಥೋಲಿಕ್ ಧರ್ಮ ಮತ್ತು ಸುಧಾರಕರುಗಳ 'Augsburg Confession' ಇವುಗಳಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳುವುದಕ್ಕೆ ಅನುಮತಿ ನೀಡಲಾಯಿತು; ಮತ್ತು ಅರಸನ ಧರ್ಮವು ಆತನು ಆಳುವ ದೇಶದ ಧರ್ಮವಾಯಿತು. ಅದರಲ್ಲಿ ಪ್ರತಿ ಸರ್ಕಾರವೂ ತಮ್ಮ ಪ್ರಜೆಗಳಿಗಾಗಿ ವಿಶ್ವಾಸ ಸೂತ್ರವೊಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿತ್ತು."

ವಾಸ್ತವವಾಗಿ, ಆ ಕಾಲದ ರಾಜಕೀಯ ಪರಿಸ್ಥಿತಿಗಳಲ್ಲಿ, ಅವರೊಡನೆ ಸುಧಾರಣೆಯ ನಾಯಕರುಗಳು ಕೂಡಾ ಕೆಲವೊಂದು ನೀತಿ ಮತ್ತು ಪೋಪನ ಅಧಿಕಾರದ ಕೆಲವು ತಪ್ಪು ಸಿದ್ಧಾಂತಗಳ ಬಗ್ಗೆ ಎಚ್ಚೆತ್ತುಕೊಳ್ಳುವದು ಕೇವಲ ಆರಂಭವಾಗಿದ್ದು, ನಮ್ಮ ಶುದ್ಧೀಕರಣವನ್ನು ಹೆಚ್ಚು ಸಾದ್ಯಂತವಾಗಿ ಮಾಡದಿರುವ ಬಗ್ಗೆ ಅವರನ್ನು ಖಂಡಿಸುವ ಬದಲಾಗಿ ಸರಿಯಾದುದರ ಕಡೆಗೆ ಅವರು ತೆಗೆದುಕೊಂಡ ಕ್ಷಿಪ್ರ ಪ್ರಗತಿಯನ್ನು (rapid strides) ನೋಡುವಾಗ ನಮಗೆ ಆಶ್ಚರ್ಯವೆನಿಸುತ್ತದೆ. ಆದರೆ ಯಾವಾಗ ಪ್ರೊತಸ್ತಾಂತ ಸಭೆಗಳು ದೇಶದಲ್ಲಿ ಅನ್ಯೋನ್ಯಗೊಂಡವೋ ಆಗ ಪ್ರಗತಿ ಮತ್ತು ಸುಧಾರಣೆಗಳು ಸ್ಥಗಿತಗೊಂಡವು. ತಕ್ಷಣದಲ್ಲಿ ಪಂಥಗಳು ರಚನೆಗೊಂಡವು ಮತ್ತು ಅವುಗಳು ರೋಮಿನ ಶಾಸನಗಳಂತೆಯೇ ಬಹಳ ಮಟ್ಟಿಗೆ ಜ್ಞಾನದ ಬೆಳವಣಿಗೆ ಫಲದಾಯಕವಲ್ಲದೆಯೂ, ವಿರೋಧವಾಗಿಯೂ ಇತ್ತು. ರೋಮ್‌ಗಿಂತ ಸತ್ಯಕ್ಕೆ ಹತ್ತಿರವಾಗಿದ್ದರೂ – ದಾಸತ್ವವು ಬಹಳಷ್ಟು ತೀವ್ರವಾಗಿತ್ತು.

ಈ ಹಿಂದೆ ಪೋಪನ ಅಧಿಕಾರದಲ್ಲಿ ಸತ್ಯಕ್ಕೆ ಅನ್ಯಾಯ ಮಾಡುವಂತ ಕಾರ್ಯವೆಸಗಿದ್ದ ಹಾಗೆಯೇ ಸಭೆ ಮತ್ತು ದೇಶದ ನಡುವೆ ಅದೇ ರೀತಿಯ ಅನ್ಯೋನ್ಯತೆಯು ಹಾನಿ ಮಾಡಿತು. ಅದೊಂದು ಪಾಶದಂತಿದ್ದು ಉದಾತ್ತವಾಗಿ ಶುರುವಾದದ್ದನ್ನು ವಿರೋಧಿಯು ಪವಿತ್ರಾಲಯದ ಶುದ್ಧೀಕರಣಕ್ಕೆ ಅಡ್ಡಿಪಡಿಸಿ ಅದಕ್ಕೆ ತಡೆಯೊಡ್ಡಿದನು. ಸುಧಾರಣೆ ಮತ್ತು ಶುದ್ಧೀಕರಣವು ಕೆಲವು ಕಾಲದವರೆಗೆ ನಿಂತು ಹೋಯಿತು. ಶುದ್ಧೀಕರಣದೊಂದಿಗೆ ಪ್ರಗತಿಹೊಂದುವ ಬದಲಾಗಿ ಸುಧಾರಕರು ತಮ್ಮ ಸಂಘಟನೆಯ ಬಗ್ಗೆ, ಮತ್ತು ಮೊದಲೂ ಜೋರಾಗಿ ಖಂಡಿಸಿದ್ದ ಹಲವಾರು ಪೋಪನ ಹಳೆಯ ತತ್ವಾಭಿಪ್ರಾಯಗಳನ್ನು ಪುನರ್‌ರಚಿಸುವ ಮತ್ತು ಪುನಃ ಮೆರಗುಕೊಡುವ ಬಗ್ಗೆ ಹೆಚ್ಚಿನ ಗಮನ ಕೊಡುವವರಾದರು. ಈ ರೀತಿಯಲ್ಲಿ ಸೈತಾನನು ಸುಧಾರಕರನ್ನು ಸಭೆ ಮತ್ತು ದೇಶದ ಅನ್ಯೋನ್ಯತೆ ಎಂಬ ವೇಶ್ಯಾವೃತ್ತಿಯ ತನ್ನ ಬಲೆಗೆ ಹಾಕಿಕೊಂಡನು. ಅವರು ರೋಮಿನ ಸಭೆಯಲ್ಲಿದ್ದ ಅದನ್ನು ಈ ಮೊದಲು ಖಂಡಿಸಿದ್ದರು. ಈ ರೀತಿಯಲ್ಲಿ ಪೋಪನ ಅಧಿಕಾರವು ಹೊಂದಿದ ಮಾರಣಾಂತಕರ ಗಾಯವನ್ನು ಸ್ವಲ್ಪಸಮಯದ ಮಟ್ಟಿಗೆ ಗುಣಹೊಂದಿಕೊಂಡಿತು (ಪ್ರಕಟನೆ 13:3).

* ಫಿಷರನ ವಿಶ್ವ ಇತಿಹಾಸ, 402–412 ಪುಟಗಳು.

ಆದರೆ, ಈ ರೀತಿಯಲ್ಲಿ ಪ್ರಾರಂಭಗೊಂಡಿದ್ದ ಮತ್ತು ಈ ರೀತಿಯಲ್ಲಿ ಭಂಗಗೊಂಡ ಶುದ್ಧೀಕರಣವು ಹೊಸದಾಗಿ ಪ್ರಾರಂಭವಾಗಿ, ಮುಂದುವರೆಯಬೇಕು; ಯಾಕೆಂದರೆ, 2300 ವರ್ಷಗಳ ಅಂತ್ಯದಲ್ಲಿ ಪವಿತ್ರಾಲಯವು ಶುದ್ಧೀಕರಣ ಹೊಂದಿಕೊಳ್ಳಲೇ ಬೇಕಾಗಿದೆ. ಅಂತೆಯೇ ಇದೆ. ಹೀಗಾಗಿ ಅದು ಸತ್ಯವೇದದ ಪುನರಾವರ್ತನೆಯು ನಂಬಿಕೆ ಒಂದೇ ಅಧಿಕಾರವಾಗಿ ಸುಧಾರಣೆಯು ಪ್ರಾರಂಭವಾಗಿ, ತನ್ನ ಬೀಜಗಳನ್ನು ಬಲವಾಗಿ ಬಿತ್ತಿದ ಬೀಜವು ಮೊಳಕೆಯೊಡೆಯಲು ಪ್ರಾರಂಭವಾಯಿತು, ಹಾಗೂ ಒಂದಲ್ಲ ಒಂದು ಸುಧಾರಣೆಯನ್ನು ತಂದಿತು. ಸುಧಾರಣಾ ನಾಯಕರು ತಮ್ಮ ಶಕ್ತಿಗೂ ಮೀರಿ ತ್ವರಿತವಾಗಿ ಸುಧಾರಣೆಯು ಹರಡದಂತೆ ತಡೆಯಲು ಪ್ರಯತ್ನಿಸಿದರೂ, ಅದು ಪಂಥಗಳನ್ನು ಮತ್ತು ನಂಬಿಕೆಯ ಬುರುಜುಗಳನ್ನು ಸ್ಥಾಪಿಸುವುದರ ಮೂಲಕ ಸತ್ಯವೇದದ ಬೋಧನೆಯನ್ನು ಉದಾಸೀನ ಮಾಡಿತು ಮತ್ತು ತಮ್ಮ ಮೇಲೆ ನಾಸ್ತಿಕತೆಯ ಶಾಪವನ್ನು ಬರಮಾಡಿಕೊಳ್ಳದೆ ಹೋಗಲು ಯಾರಿಗೂ ಅನುಮತಿ ದೊರೆಯಲಿಲ್ಲ.

ಲೂಥರನ ದಿನದಿಂದ ಈವರೆಗೆ, ಸಭೆಯ ಹಾದಿಯ ಮೇಲೆ ಕ್ಷಣದರ್ಶನ ಮಾಡುವಾಗ, ಹಂತ ಹಂತವಾಗಿ ಸುಧಾರಣೆಯು ಅಥವಾ ಶುದ್ಧೀಕರಣವು ಪ್ರಗತಿಯಲ್ಲಿದೆ ಎಂಬುದನ್ನು ನಾವು ನೋಡಬಹುದು. ಆದಾಗ್ಯೂ, ಅದೇ ಧೋರಣೆಯನ್ನು ಪ್ರತಿಯೊಂದು ಹಂತದಲ್ಲಿಯೂ ಇರುವುದನ್ನು ಗುರುತಿಸಬಹುದು; ಪ್ರತಿಯೊಂದು ಸುಧಾರಕರ ತಂಡವೂ ಅವರು ತಮ್ಮ ಸ್ವಂತ ಶುದ್ಧೀಕರಣದ ಅಲ್ಪ ಕಾರ್ಯವನ್ನು ನೆರವೇರಿಸುವಾಗಲೂ ಇತರರೊಡನೆ ಸೇರಿಕೊಂಡು ಮುಂದಿನ ಸುಧಾರಣೆ ಅಥವಾ ಶುದ್ಧೀಕರಣಕ್ಕೆ ವಿರೋಧವಾಗಿ ಅದನ್ನು ನಿಲ್ಲಿಸಿದ್ದಾರೆ.

ಈ ರೀತಿಯಲ್ಲಿ ಚರ್ಚ್ ಆಫ್ ಇಂಗ್ಲೇಂಡ್, ಚರ್ಚ್ ಅಫ್ ರೋಮಿನ ಕೆಲವೊಂದು ಹುಲುಸಾದ ವಿಚಾರಸರಣಿಗಳನ್ನು ಪಕ್ಕಕ್ಕಿಟ್ಟು ಅದು ತಾನೇ ನಿಜವಾದ ಸಭೆಯೆಂದು ಹೇಳಿಕೊಳ್ಳುತ್ತಾ ಅದರ ಬಿಷೋಪರುಗಳು ಅಪೋಸ್ತೋಲಿಕ ಅನುಕ್ರಮ ಹೊಂದಿದ್ದಾರೆ, ಹೀಗಾಗಿ ದೇವರಿಂದ ಬಂದ ಪರಂಪರೆಯ ಮೇಲೆ ತನಗೆ ಪ್ರಧಾನ ನಿಯಂತ್ರಣವಿದೆ ಎಂದು ಈಗಲೂ ಹೇಳಿಕೊಳ್ಳುತ್ತಿದೆ. ರೋಮಿನ ಈ 'ಮಗಳು' ತನ್ನ 'ತಾಯಿ'ಯನ್ನು ಬಿಟ್ಟು ಇಂಗ್ಲೇಂಡಿನ ಲಾಭದಾಯಕ ತೋಳುಗಳಲ್ಲಿ ಸೇರಿದ್ದಾಳೆ ಮತ್ತು ಚಕ್ರಾಧಿಪತ್ಯದ ಸಾರ್ವಭೌಮನನ್ನು ಸಭೆಯ ಮುಖ್ಯಸ್ಥನನ್ನಾಗಿ ಮಾಡಿದ್ದಾಳೆ. ಆದಾಗ್ಯೂ, ಲೂಥರನ್ ಮಗಳ ಬಗ್ಗೆ, ಇದು ಸಹಾ ಸುಧಾರಣೆಯಾಗಿದೆ ಮತ್ತು ಸರಿಯಾದ ದಿಕ್ಕಿನಲ್ಲಿ – ಭಾಗಶಃವಾದ ಶುದ್ಧೀಕರಣವಾಗಿದೆ. Calvin, Knox ಮತ್ತಿತರರು ದೇವರಿಂದ ಹೊರಬೀಳುವ ಸಂಗತಿಗಳ ಮುನ್ನರಿವು, ಪೋಪನ ಕಳಪೆತನದಿಂದ ಕಳೆದುಹೋಗಿದೆ ಎಂಬುದನ್ನು ಕಂಡುಹಿಡಿದರು; ಮತ್ತು ದೇವರ ಯೋಜನೆಯ ಜಯವು ತಪ್ಪುಮಾಡುವ ಸ್ವಭಾವವುಳ್ಳ ಮಾನವನ ಪ್ರಯತ್ನಗಳ ಮೇಲೆ ಸಂಪೂರ್ಣವಾಗಿ ಆತುಕೊಂಡಿದೆ ಎಂಬ ಕಲ್ಪನೆಯನ್ನು ತಳ್ಳಿಹಾಕಿದರು. ಸಭೆಯು ಐಹಿಕ ಆಯುಧಗಳಿಂದ ಜಯವನ್ನು ಪಡಕೊಳ್ಳುವಂತೆ ರಾಜ್ಯದ ತೋಳುಗಳ ಮೇಲೆ ಆತುಕೊಂಡಿಲ್ಲ ಎಂಬುವ ಸಿದ್ಧಾಂತವನ್ನು ತೋರಿಸುವಂತೆ ಸಹಾಯಮಾಡಿತು. ಈ ಜನರು ಮಹಾಅಮೂಲ್ಯವಾದ ಕಾರ್ಯಗಳನ್ನು ಮಾಡಿದರು ಮತ್ತು ಅವುಗಳು ಆಗಿನಿಂದ ಅನೇಕರು ಕಾಣುವುದಕ್ಕಿಂತ ಹೆಚ್ಚಿನ ಉತ್ತಮ ಫಲಗಳನ್ನು ಹೊತ್ತುಕೊಂಡಿದೆ. ಪರಂತು, ಇತರೆ ಹಾಳುಮಾಡುವ ತಪ್ಪುಗಳಿಂದ ಅಂಧರಾಗಿ, ಹಾಗೆಂದು ಗ್ರಹಿಸದೆ ಅವರು ಯಾರು ಪರಲೋಕದ ರಾಜ್ಯಕ್ಕೆ ಆಯ್ಕೆಗೊಳ್ಳುವುದಿಲ್ಲವೋ ಅವರು ನೀಚಪಾಪಿಗಳೆಂದು ನಿತ್ಯ ಹಿಂಸೆಗಳಿಗೆ ಗುರಿಯಾಗುತ್ತಾರೆ ಎಂಬ ತಪ್ಪನ್ನು ಪ್ರತಿಪಾದಿಸುವಂತೆ ನಡೆಸಲ್ಪಟ್ಟರು. ಕೂಡಲೇ ಅವರ ಸಿದ್ಧಾಂತಗಳು ಪ್ರೆಸ್ಬಟೇರಿಯನಿಸಂ ಎಂಬ ಹೆಸರಿನಲ್ಲಿ ಸ್ಫುಟೀಕರಿಸಲ್ಪಟ್ಟಿತು; ಮತ್ತು ದೈವಿಕ ತೀರ್ಪುಗಳ ಅಸ್ಥಿರತೆಯ ಮೊದಲ ನಿರೂಪಣೆಯನ್ನೂ ಮೀರಿ ಸುಧಾರಣೆ ಮತ್ತು ಶುದ್ಧೀಕರಣಕ್ಕೆ ಅವರಿಂದ ಸ್ವಲ್ಪವೇ ಸಹಾಯ ದೊರೆಯಿತು ಮತ್ತು ಅದರ ಸಹೋದರಿ ಗುಂಪುಗಳಂತೆ ಪ್ರೆಸ್ಬಟೇರಿಯನಿಸಂ ಕೂಡ ಶುದ್ಧೀಕರಣ ಕಾರ್ಯವನ್ನು ಅಡ್ಡಿಪಡಿಸಲು, ಮುಚ್ಚಿಹಾಕಲು ಬಹಳಷ್ಟು ಮಾಡಿದೆ.

ವೆಸ್ಲಿಯನ್ನರು ಮತ್ತು ಅವರ ಜೊತೆ ಕೆಲಸಗಾರರು, ನಿರುತ್ಸಾಹ ಮತ್ತು ಸಂಪ್ರದಾಯಗಳಿಂದ ಪೀಡಿಸಲ್ಪಟ್ಟವರಾಗಿ, ಸಭೆ ಮತ್ತು ದೇಶದ ಅನ್ಯೋನ್ಯತೆಯ ಫಲವಾಗಿ ಉಂಟಾಗಿದ್ದ ಅವರ ದಿನದಲ್ಲಿ ಪ್ರಚಲಿತವಾಗಿದ್ದ ಕೆಲವೊಂದು ಶೀತಲ ಸಂಪ್ರದಾಯಗಳನ್ನು ತೆಗೆದುಹಾಕಲು ಮತ್ತು ಕ್ರಿಸ್ತನಲ್ಲಿ ಮತ್ತು ಕ್ರಿಸ್ತನ ಅನ್ಯೋನ್ಯತೆಯಲ್ಲಿನ ವೈಯುಕ್ತಿಕ ನಂಬಿಕೆಯ ಮೂಲಕ ಉಂಟಾಗುವ ವ್ಯಕ್ತಿಗತ ಪವಿತ್ರತೆಯನ್ನು ತೋರಿಸುವದು ಅವಶ್ಯವೆಂದರು ಮತ್ತು ಕ್ರೈಸ್ತ ರಾಜ್ಯವೆಂದು ಹೇಳಿಕೊಳ್ಳುವ ರಾಜ್ಯದಲ್ಲಿ ಜನಿಸುವ ಮತ್ತು ಅಂತಹ ರಾಜ್ಯದ ಸಭೆಯಲ್ಲಿ ಜನಿಸಿದ ಮಾತ್ರಕ್ಕೆ ಕ್ರೈಸ್ತರೆಂದು ಪರಿಗಣಿಸುವುದು ನಿಜವಾದ ಕ್ರೈಸ್ತತ್ವವಲ್ಲ ಎಂಬ ಸತ್ಯವನ್ನು ಬೋಧಿಸಲು ಶ್ರಮಿಸಿದರು. ಇದು

ಅದುವರೆಗೆ ಅಭೂತಪೂರ್ವವಾಗಿತ್ತು ಮತ್ತು ಅವಶ್ಯವಾಗಿ ಶುದ್ಧೀಕರಣ ಕಾರ್ಯದ ಭಾಗವಾಗಿತ್ತು. ಆದರೆ, ಆದಿ ಸಭೆಯ ನಿರಾಡಂಬರತೆಯ ಸಮರ್ಪಕತೆಯ ಕಡೆಗೆ ಹೋಗುವ ಬದಲು, ವೆಸ್ಲಿಯುವರೂ ಸಹ ಶುದ್ಧೀಕರಣ ಮತ್ತು ಸುಧಾರಣಾ ಕಾರ್ಯವು ಮುಕ್ತಾಯಗೊಂಡಿತೆಂದು ತೀರ್ಮಾನಿಸಿದರು ಮತ್ತು ಇತರರೊಂದಿಗೆ ಮೆಥೋಡಿಸಂ ಅನ್ನು ಸಂಘಟಿಸಲು ಮತ್ತು ಆ ರೀತಿಯಾಗಿ ಮೆಥೋಡಿಸಂನ ವಿಶ್ವಾಸ ಸೂತ್ರ, ಮಾನದಂಡದೊಡನೆ ನೆಡಲು ಮುಂದುವರೆದರು. ಇದು ಪರಿಣಾಮಕಾರಿಯಾಗಿ ಮುಂದಿನ ಪ್ರಗತಿ ಮತ್ತು ಶುದ್ಧೀಕರಣವು ಕುಂಠಿತಗೊಳಿಸಿದು. ಏಕತಾವಾದ ಮತ್ತು ಸಾರ್ವತ್ರಿಕತೆ (Unitarianism and Universalism) ಇವುಗಳು ಸಾಕಾರಗೊಳಿಸುವ ದೋಷವಾಗಿದ್ದರೂ, ಅವುಗಳ ಮೂಲಕ ಅಪವಿತ್ರವಾದ ದೋಷಗಳನ್ನು ಹೊರಹಾಕುವ ಪ್ರಯತ್ನ ನಡೆಸಲಾಯಿತು. ಬಹುಶಃ ಇದು ಬೇರೆಯವು ಗಳಂತೆಯೇ ಸರಿಸಮವಾಗಿ ಸಫಲವೂ ಮತ್ತು ಅಸಫಲವೂ ಆಗಿತ್ತು.

ಬ್ಯಾಪ್ಟಿಸ್ಟ್ಸ್ ಎಂದು ಕರೆದುಕೊಳ್ಳುವವರು ಪೋಪನ ಅಧಿಕಾರವು ದೀಕ್ಷಾಸ್ನಾದ ಬಗ್ಗೆ ಪರಿಚಯಿಸಿದ್ದ ಮತ್ತೊಂದು ತಪ್ಪನ್ನು ಹೊರಹಾಕುವುದರ ಮೂಲಕ, ಅಂದರೆ ಇನ್ನೂ ವಿಶ್ವಾಸಕ್ಕೆ ಬರದೇ ಇರುವ ಚಿಕ್ಕ ಮಗುವಿನ ಮೇಲೆ ನೀರನ್ನು ಚಿಮುಕಿಸುವುದು ದೀಕ್ಷಾಸ್ನಾನವಾಗುತ್ತದೆ ಎಂಬುದನ್ನು ನಿರಾಕರಿಸಿ ಇದು ಯಾವುದೇ ರೀತಿಯಲ್ಲಿ ಕ್ರಿಸ್ತನ ಸಿದ್ಧಾಂತವನ್ನು ಸಂಕೇತಿಸುವುದಿಲ್ಲ ಎಂದು ಹೇಳುವುದರ ಮೂಲಕ ಪವಿತ್ರಾಲಯವನ್ನು ಶುದ್ಧೀಕರಿಸುವ ಮತ್ತೊಂದು ಪ್ರಯತ್ನವನ್ನು ಪ್ರತಿನಿಧಿಸುತ್ತಾರೆ. ಆದಾಗ್ಯೂ, ಸರಿಯಾದ ಬಾಹ್ಯರೂಪ ಅಥವಾ ಸಂಕೇತದ ಬಗ್ಗೆ ಬೋಧಿಸುವುದನ್ನು ಬಿಟ್ಟರೆ ಅದರಿಂದಾಚೆ ಬ್ಯಾಪ್ಟಿಸ್ಟರು ಸ್ವಲ್ಪ ಪ್ರಗತಿ ಸಾಧಿಸಿದ್ದಾರೆ. ಈಗ ಅನೇಕ ವೇಳೆ ಇತರರೊಂದಿಗೆ ಸೇರಿ ಯಾವುದೇ ಮುಂದಿನ ಶುದ್ಧೀಕರಣವನ್ನು ವಿರೋಧಿಸುವವರೂ ಮತ್ತು ಅಡಚಣೆ ಮಾಡುವವರೂ ಆಗಿ ಕಂಡುಬರುತ್ತಾರೆ.

ನಂತರದಲ್ಲಿ ಮತ್ತೊಂದು ಸುಧಾರಣೆಯು 'ಕ್ರಿಸ್ತನ ಸಭೆ' (Christian Church) ಅಥವಾ (Disciples) ಎಂಬ ಹೆಸರಿನಲ್ಲಿ ಕಂಡುಬರುತ್ತದೆ. ಈ ಪಂಥವನ್ನು 1827ರಲ್ಲಿ ಅಲೆಗ್ಸಾಂಡರ್ ಕ್ಯಾಂಪ್‌ಬೆಲ್ ಎಂಬಾತನು ಪ್ರಾರಂಭಿಸಿದನು. ಅವರು ತಮ್ಮ ಸಂಸ್ಥೆಯಲ್ಲಿ ವಿಶೇಷವಾಗಿ ಪ್ರತಿಪಾದಿಸಿದ ಸುಧಾರಣೆಯು ಸಭೆಯ ಸರ್ಕಾರದಲ್ಲಿ ಅಪೋಸ್ತೋಲಿಕ ನಿರಾಡಂಬರತೆ; ಸತ್ಯವೇದವು ಮಾತ್ರವೇ ವಿಶ್ವಾಸಸೂತ್ರ, ಕ್ರಿಸ್ತನ ಕೈಕೆಳಗೆ ಎಲ್ಲಾ ಸದಸ್ಯರೂ ಸಮಾನರು ಮತ್ತು ಆತನೇ ಅವರ ಶಿರಸ್ಸು ಎಂಬುದು. ಆದುದರಿಂದ ರೆವೆರೆಂಡ್, ಡಾಕ್ಟರ್ ಆಫ್ ಡಿವಿನಿಟಿ ಮುಂತಾದ ಧರ್ಮೋಪದೇಶಕರ ಬಿರುದುಗಳೆಲ್ಲವೂ ರೋಮಿನವು, ಮತ್ತು ಕ್ರಿಸ್ತನ ಉತ್ಸಾಹಕ್ಕೆ ಮತ್ತು ಶುದ್ಧ ಕ್ರೈಸ್ತತ್ವಕ್ಕೆ ವಿರೋಧಾತ್ಮಕ ವಾದುದು ಎಂದು ರದ್ದುಪಡಿಸುವಂತೆ ಅದು "ನೀವೆಲ್ಲರೂ ಸಹೋದರರು ಮತ್ತು ಒಬ್ಬನು ಮಾತ್ರನೇ ನಿಮ್ಮ ಒಡೆಯನು" ಎಂದು ಹೇಳುತ್ತಾರೆ. ಅದರ ವಿನ್ಯಾಸ ಮತ್ತು ಶುದ್ಧೀಕರಣವು ಇದುವರೆಗೆ ನಡೆದಂತೆ ಒಳ್ಳೇದಾಗಿತ್ತು. ಎಲ್ಲಾ ಪಂಗಡಗಳ ಕೆಲವರ ಮನಸ್ಸಿನಲ್ಲಿ ಅದು ಬಿಡುಗಡೆ ನೀಡಿ ಫಲದಾಯಕವಾಯಿತು. ಆದರೆ, ಈ ಪಂಗಡಗಳು ಬೇರೆಯವುಗಳಂತೆ ಮುಂದಿನ ಪ್ರಗತಿಯ ಪ್ರಯತ್ನವನ್ನು ಮಾಡದೇ ಹೋಯಿತು ಮತ್ತು ಅದರ ಸುಧಾರಣಾ ಉತ್ಸಾಹವು ಆಗಲೇ ಸತ್ತುಹೋಯಿತು. ಅಲ್ಲದೇ ಸತ್ಯವೇದವು ಮಾತ್ರವೇ ವಿಶ್ವಾಸ ಸೂತ್ರ ಎಂದು ಹೇಳುತ್ತಾ ಅದು ಹಳೆಯ ಜಾಡಿನಲ್ಲಿ ಸ್ಥಗಿತಗೊಂಡಿತು ಮತ್ತು ಯಾವುದೇ ಪ್ರಗತಿ ಇಲ್ಲದೆ ಅಲ್ಲಿ ಅದು ಸುತ್ತುತ್ತಿದೆ. ಸೂತ್ರಗಳಿಂದ ಮತ್ತು ಮಾನವ ಸಂಪ್ರದಾಯಗಳ ಸಂಕೋಲೆಗಳಿಂದ ಬಿಡುಗಡೆಯನ್ನು ಕೇಳಿ, ಅದು ಆ ಬಿಡುಗಡೆಯನ್ನು ಉಪಯೋಗಿಸಿಕೊಳ್ಳುವಲ್ಲಿ ಸೋತು ಹೋಗಿದೆ, ಆ ಕಾರಣ ನಿಜವಾಗಿಯೂ ಆತ್ಮದಿಂದ ಬಂಧಿಸಲ್ಪಟ್ಟಿದೆ, ಪರಿಣಾಮವಾಗಿ ಕೃಪೆಯಲ್ಲಿ, ಜ್ಞಾನದಲ್ಲಿ ಬೆಳೆಯಲು ವಿಫಲವಾಗಿದೆ, ಯಾವುದೇ ಬರವಣಿಗೆಯ ಸೂತ್ರಗಳಿಂದ ಬಂಧಿಸಲ್ಪಡದಿದ್ದರೂ, ಸಂಪ್ರದಾಯಗಳ ಬಗ್ಗೆ ಜನರ ಬಗ್ಗೆ ಅದಕ್ಕಿರುವ ಗೌರವದ ಕಾರಣ ಮತ್ತು ಸ್ವಯಂ ಆತ್ಮಸಂತೃಪ್ತಿಯ ನಿಮಿತ್ತ ಅದು ಬೇಗನೇ ಉಭಯಸಂಕಟಕ್ಕೆ ಸಿಲುಕಿ ಪವಿತ್ರಾಲಯ ಶುದ್ಧೀಕರಣದ ಮುಂದಿನ ಪ್ರಗತಿಯಿಂದ ನಿದ್ರೆಗೆ ಜಾರಿದೆ ಮತ್ತು ಅದು ಹಿಂದೆ ಇದ್ದ ಸ್ಥಾನಕ್ಕಿಂತಲೂ ಹಿಮ್ಮುಖವಾಗಿದೆ.

ನಾವು ಕೆಲವೇ ಸುಧಾರಕರುಗಳು ಮತ್ತು ಸುಧಾರಣಾ ಚಳುವಳಿಗಳ ಬಗ್ಗೆ ಹೇಳುವಾಗ ಇತರರನ್ನು ತಿರಸ್ಕರಿಸುತ್ತಿದ್ದೇವೆ ಅಥವಾ ನಿರ್ಲಕ್ಷಿಸುತ್ತಿದ್ದೇವೆ ಎಂದು ಅರ್ಥಮಾಡಿಕೊಳ್ಳಬಾರದು. ಅದರಿಂದ ದೂರವಿರೋಣ; ಸುಧಾರಣೆಯು ಪ್ರಚಲಿತದಲ್ಲಿದೆ ಹಾಗೂ ನಿಜವಾದದ್ದು ಮತ್ತು ನಿಷ್ಠಾವಂತ ಕ್ರೈಸ್ತರೂ ಶುದ್ಧೀಕರಣ ಕಾರ್ಯದಲ್ಲಿ ತಮ್ಮ ಪಾಲನ್ನು ಹೊಂದಿದ್ದಾರೆ. ಮುಂಚಿನ ತರಬೇತಿಯಿಂದ ದುರಾಗ್ರಹಪೀಡಿತರಾಗಿ ಮತ್ತು ಗಟ್ಟಿಯಾದ ಧ್ವನಿಯಿಂದ

ಮತ್ತು ಕೊಚ್ಚಿಕೊಳ್ಳುವ ತಪ್ಪಾದ ಹೇಳಿಕೆಗಳಿಗೆ ಬೆರಗಾಗಿ, ಕೆಲವರು ಮಾತ್ರವೇ ಅದರಲ್ಲಿದ್ದ ಅಪಾರವಾದ ತಪ್ಪುಗಳನ್ನು ನೋಡಬಲ್ಲವರಾಗಿದ್ದರು. ಅಲ್ಲಿಂದ ಮುಂದಕ್ಕೆ ಅದರ ಪರಿಣಾಮವಾಗಿ ಶುದ್ಧೀಕರಣದಲ್ಲಿ ಮುಂದುವರೆಯುವ ಅಗತ್ಯತೆಗಳನ್ನು ಕಾಣಬಹುದು. ಇವುಗಳು ನಮ್ಮ ವಿರೋಧಿಯಾದ ಸೈತಾನನ ಅನುಕೂಲತೆಯಾಗಿದ್ದು ಆತನು ಭಕ್ತರನ್ನು ಬಂಧಿಸುವುದಕ್ಕೂ ಮತ್ತು ಶುದ್ಧೀಕರಣ ಕಾರ್ಯಕ್ಕೆ ಅಡ್ಡಿಪಡಿಸುವುದಕ್ಕೂ ತಡಮಾಡುವುದಿಲ್ಲ.

ಹಿಂದಿನ ಅಧ್ಯಾಯದಲ್ಲಿ ಮ್ಯಾಸಚೂಸೆಟ್ಸ್‌ನ ಮಿ. ವಿಲಿಯಂ ಮಿಲ್ಲರ್‌ರವರ ಬಗ್ಗೆ ಹೇಳುವಾಗ ಸಂಕ್ಷಿಪ್ತವಾಗಿ ತಿಳಿಸಿದ್ದ ಮತ್ತೊಂದು ಸುಧಾರಣೆಯು ಕೆಲವು ವಿಷಯಗಳಲ್ಲಿ ಎಲ್ಲವುಗಳಿಗಿಂತ ಸಾದ್ಯಂತವಾಗಿದೆ. ಅವರು ಬ್ಯಾಪ್ಟಿಸ್ಟ್ ಪಂಗಡ ಸದಸ್ಯರಾಗಿದ್ದವರು ಮತ್ತು ಈ ಚಳುವಳಿಯ ಸಾಧನವಾಗಿ ಉಪಯೋಗಿಸಲ್ಪಟ್ಟವರು. ಅವರು ಸತ್ಯವೇದವು ಕಾಲಗಳ ಬಗ್ಗೆ ಕೆಲವು ಸಂಗತಿಗಳನ್ನು ಮತ್ತು ದೇವರ ಯೋಜನೆಯ ಕ್ರಮವನ್ನು ತಿಳಿಸುತ್ತದೆ ಎಂಬ ಸತ್ಯವನ್ನು ಸಭೆಯ ಗಮನಕ್ಕೆ ಬಹಿರಂಗಪಡಿಸಿದರು. ಅವರು ಪ್ರವಾದಿಗಳು ದಾಖಲಿಸಿದ್ದ ಸಮಯಗಳನ್ನು, ಮತ್ತು ಉಚಿತ ಸಮಯದಲ್ಲಿ ಜ್ಞಾನಿಗಳು ಅವುಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂಬ ಹೇಳಿಕೆಯು ಅದರೊಂದಿಗಿರುವುದನ್ನು ಕಂಡುಕೊಂಡರು ಮತ್ತು ಅವರು ವಿವರಿಸಿರುವ ಆ ವರ್ಗದವರಾಗಬೇಕೆಂದು ಬಯಸಿದರು. ಅವರು ಬಹಳವಾಗಿ ಹುಡುಕಿ ರೋಮಿನ ಸಂಪ್ರದಾಯಗಳಿಂದ ಕಣ್ಣಿಗೆ ಮರೆಯಾಗಿದ್ದ ಅನೇಕ ಬಲು ಕುತೂಹಲಕರ ಸಂಗತಿಗಳನ್ನು ಕಂಡುಕೊಂಡರು. ಉಳಿದವುಗಳಿಂದ ಯೇಸುವಿನ ಮೊದಲನೆಯ ಬರೋಣವು ಪ್ರಪಂಚವನ್ನು ಕೊಂಡುಕೊಳ್ಳುವವರಾಗಿದ್ದರೆ, ಆತನ ಎರಡನೆಯ ಬರೋಣವು ನಂಬಿಗಸ್ತರಿಗೆ ದೇವರು ದಯಪಾಲಿಸುವ ಜೀವಕರ ಆಶೀರ್ವಾದವಾಗಿದೆ ಎಂದು ಅರಿತು ಕೊಂಡರು. ವಾಸ್ತವವಾಗಿ, ಆ ಈಡುಬಲಿ ಮತ್ತು ಪುನರುದ್ಧಾರ ಇವುಗಳು ಒಂದು ವಿಮೋಚನಾ ಯೋಜನೆಯ ಎರಡು ಭಾಗಗಳಾಗಿವೆ ಎಂದು ಕಂಡುಕೊಂಡರು.

ಒಂದು ಪ್ರಾಮಾಣಿಕ ಮತ್ತು ನಿಷ್ಠಾವಂತ ಹೃದಯವು ಅಂಥಾಃ ಸುಸಮಾಚಾರವನ್ನು ಗ್ರಹಿಸುವುದು ಅದನ್ನು ಪ್ರಸಿದ್ಧಪಡಿಸುವುದಕ್ಕಿಂತ ಕಡಿಮೆಯಾದುದಲ್ಲ; ಅದನ್ನೇ ಅವರು ಮಾಡಿದರು. ಈ ಸತ್ಯವನ್ನು ಬಯಲು ಮಾಡಿದಾಗ ಅದು ಕೆಲವೊಂದು ತಪ್ಪುಗಳ ನಿರಾಕರಣೆಗೆ ನಡೆಸಿತು. ಹೀಗಾಗಿ ಅವರು ತನ್ನ ಪ್ರಭಾವಕ್ಕೆ ಬಂದ ಎಲ್ಲವುಗಳ ಶುದ್ಧೀಕರಣ ಕಾರ್ಯವನ್ನು ಮಾಡಿದರು. ಉದಾಹರಣೆಗೆ, ನಮ್ಮ ಕರ್ತನ ಎರಡನೆಯ ಬರೋಣವು ಆತನ ರಾಜ್ಯವನ್ನು ಸಿದ್ಧಪಡಿಸುವುದೂ, ಆತನ ಸಭೆಯನ್ನು ಮೇಲಕ್ಕೇರಿಸುವುದೂ ಆಗಿದೆ. ಹಾಗಿರುವಾಗ, ಸಭೆಗಳು ಭೂಮಿಯ ರಾಜ್ಯಗಳೊಡನೆ ಸಂಯೋಜನೆ ಗೊಳ್ಳುವುದು ಎಂದು ಸಾಧಿಸುವುದು. ಆದುದರಿಂದ ಕೆಲವರು ತಾವೇ ದೇವರ ರಾಜ್ಯವೆಂದೂ, ಅವರು ಈಗ ಭೂಲೋಕದ ಮೇಲೆ ಆಳ್ವಿಕೆಮಾಡಿ ಅಧಿಕಾರ ನಡೆಸುತ್ತಿದ್ದಾರೆ ಎಂದು ಸಾಧಿಸುತ್ತಾರೆ, ಆದರೆ ಅದು ಕಲ್ಪನೆಯಷ್ಟೆ. ಯಾಕೆಂದರೆ, ಕ್ರಿಸ್ತನ ರಾಜ್ಯವು ಇನ್ನೂ ಸಿದ್ಧಗೊಂಡಿಲ್ಲ. ಹಾಗಾಗಿ ಈ ಸಿದ್ಧತೆಯು ಈ ಲೋಕದ ಅರಸನಾದ ಸೈತಾನನಿಂದ ಏರಿಸಲ್ಪಟ್ಟಿದೆ. ಆಳ್ವಿಕೆ ಮಾಡುವವರು ಎಷ್ಟೇ ತಿಳುವಳಿಕೆ ಇಲ್ಲವಾದರೂ ಆತನ (ಸೈತಾನನ) ಸ್ವಂತ ಇಚ್ಛೆಯಂತೆ ಆಳ್ವಿಕೆಯು ಧಾರಾಳವಾಗಿ ಕಾರ್ಯನಿರ್ವಹಿಸುತ್ತದೆ.

ಮತ್ತೊಂದು ತಪ್ಪೇನೆಂದರೆ, ಅದನ್ನು ತೆಗೆದು ಹಾಕುವುದಕ್ಕಾಗಿಯೇ ನಡೆಸಿರುವ ಮಿಸ್ಟರ್ ಮಿಲ್ಲರ್‌ರವರ ಬೋಧನೆಯು ಏನೆಂದರೆ ಅದು ಮಾನವರ ಸ್ವಾಭಾವಿಕ ಅಮರತ್ವ. ಮಾನವರು ಸ್ವಾಭಾವಿಕವಾಗಿ ಅಮರರು ಎಂಬ ಈ ಭಾವನೆಯು ಬಹಳ ಹಿಂದಿನಿಂದ ಪ್ರಚಲಿತವಾಗಿದೆ. ಅಂದರೆ, ಒಮ್ಮೆ ಸೃಷ್ಟಿಸಲ್ಪಟ್ಟ ಮೇಲೆ ಆತನು ಎಂದೂ ಸಾಯುವುದಿಲ್ಲ, ಮತ್ತು ಮರಣವು ಕೇವಲ ಭ್ರಮೆಯಾಗಿದೆ; ಅಂದರೆ ಮಾನವನು ಸತ್ತಂತೆ ಕಂಡುಬರುವನು, ಆದರೆ ನಿಜವಾಗಿಯೂ ಹಾಗಾಗುವುದಿಲ್ಲ, ಆತನು ಕೇವಲ ತನ್ನ ರೂಪವನ್ನು ಬದಲಿಸಿಕೊಂಡು ವಿಕಾಸದ ಮತ್ತೊಂದು ಹಂತವನ್ನು ತೆಗೆದುಕೊಳ್ಳುತ್ತಾನೆ. ಮಿಸ್ಟರ್ ಮಿಲ್ಲರ್‌ರವರು ಇತರರಂತೆ ಈ ವಿಷಯವನ್ನು ನಂಬುವವರಾಗಿದ್ದರು; ಆದಾಗ್ಯೂ ಅವರು ಸತ್ಯದ ಕರೆಗೆ ಗಮನ ಕೊಟ್ಟಾಗ, ವಿಶಿಷ್ಟವಾಗಿ ಕರ್ತನ ಬರೋಣದ ಸತ್ಯ ಮತ್ತು ಸತ್ತವರ ಪುನರುತ್ಥಾನ ಮೊದಲನೆಯದಾಗಿ ಈ ವಿನಾಶಕಾರಿ ತಪ್ಪನ್ನು ಎತ್ತಿ ತೋರಿಸಿದನು – ಅದೇನೆಂದರೆ ಯಾರೂ ಸಾಯುವದಿಲ್ಲ. ಆದ್ದರಿಂದ ಪುನರುತ್ಥಾನದ ಅವಶ್ಯಕತೆ ಇಲ್ಲ ಎಂಬ ಭಾವನೆಯನ್ನು ಬಹಿರಂಗಪಡಿಸಿದನು. ಆದರೆ ಈ ಪ್ರಸ್ತಾಪದ ವಿಮರ್ಶಾತ್ಮಕ ಪರೀಕ್ಷೆಯನ್ನು ನಾವು ಮುಂದಿನ ಸಂಪುಟಕ್ಕೆ ಬಿಡುತ್ತೇವೆ. ಅದರಲ್ಲಿ ಅಮರತ್ವ ಮತ್ತು ನಿತ್ಯಜೀವವು ಕ್ರಿಸ್ತನಿಂದ ಮಾತ್ರವೇ ದೊರೆಯುವ ದಯೆಗಳಾಗಿವೆ ಮತ್ತು ಇದು ಕೆಡುಕರಿಗೆ ವಾಗ್ದಾನ ಮಾಡಲ್ಪಟ್ಟಿಲ್ಲ ಮತ್ತು ದಯಪಾಲಿಸ

ಲ್ಪಡುವುದಿಲ್ಲ ಎಂಬುದನ್ನು ತೋರಿಸಲಾಗುವುದು. ಮಾನವ ಅಮರತ್ವದ ಎಂಬ ಆಲೋಚನೆಯ ಮೇಲೆ ಆತುಕೊಂಡು ಬೆಳೆಯುವುದು ರೋಮಿನವರ 'ಶುದ್ದಿಲೋಕ' (Purgatory) ಎಂಬ ಸಿದ್ಧಾಂತವಾಗಿದೆ. ಮತ್ತು ಇದಕ್ಕಿಂತಲೂ ಇನ್ನೂ ಭಯಂಕರವಾದುದೆಂದರೆ ಪ್ರೊತಸ್ತಾಂತರ ಸಿದ್ಧಾಂತವಾದ ನರಕದಲ್ಲಿನ ಎಂದೂ ಮುಗಿಯದ ನಿತ್ಯನಿರಂತರವಾದ ಯಾತನೆ. ಆದುದರಿಂದ ಮಾನವರು ನಿತ್ಯಕಾಲ ಜೀವಿಸಬೇಕಾದರೆ (ಅಮರನಾದಲ್ಲಿ ದೇವರು ಕೂಡಾ ಆತನನ್ನು ನಾಶಪಡಿಸಲಾಗದು) ಆತನು ಎಂದೂ ಮುಗಿಯದ ಸಂತೋಷದಲ್ಲಿ ಜೀವಿಸಬೇಕು ಅಥವಾ ಎಂದೂ ಮುಗಿಯದ ಯಾತನೆಯೊಡನೆ ಜೀವಿಸಬೇಕು ಎಂದು ಅವರು ತರ್ಕಿಸುತ್ತಾರೆ. ಆದುದರಿಂದ, ಅವರು, ಆತನು ಮರಣದಲ್ಲಿ ನಿತ್ಯನಿರಂತರವಾದ ಸ್ಥಿತಿಗೆ ಒಪ್ಪಿಸಲ್ಪಡುತ್ತಾನೆ ಮತ್ತು ಹೆಚ್ಚಿನವರು ಆಗ ನಿತ್ಯಯಾತನೆಯನ್ನು ಪ್ರಾರಂಭಿಸಬೇಕಾಗುತ್ತದೆ, ಯಾಕೆಂದರೆ ಪ್ರಸ್ತುತ ಜೀವಿತದ ಕೆಲವೇ ವರ್ಷಗಳಲ್ಲಿ ಅವರು ಸತ್ಯಮಾರ್ಗದ ಜ್ಞಾನವನ್ನು ಹೊಂದಿಕೊಳ್ಳಲು ವಿಫಲರಾಗುತ್ತಾರೆ ಅಥವಾ ಆ ಜ್ಞಾನವನ್ನು ಹೊಂದಿಕೊಂಡು ಅವರು ಪಡೆದುಕೊಂಡು ಬಂದಿರುವ ಬಲಹೀನತೆ ಮುಂತಾದವುಗಳಿಂದ ಅದರಲ್ಲಿ ನಡೆಯಲು ಅಶಕ್ತರಾಗುತ್ತಾರೆ ಎಂದು ಹೇಳುತ್ತಾರೆ.

ಕ್ರಿಸ್ತನ ಎರಡನೆಯ ಬರೋಣ ಮತ್ತು ಪುನರುತ್ಥಾನ ಇವುಗಳು ಬಗ್ಗೆ ಆಗ ತಕ್ಕ ಸಮಯವಾದ್ದರಿಂದ ಪ್ರಕಟಿಸುವ ಬೋಧನೆಗಳಿಂದ ಮಟ್ಟ ಹಾಕಬೇಕಾದ ತಪ್ಪುಗಳ ಆ ಮಹಾ ಬುಡವನ್ನು ಹರಿದು ಚೂರಾಗಿ ಹೊರದೂಡಲ್ಪಟ್ಟಿತು. ಸತ್ತವರು ಪರಲೋಕ ಅಥವಾ ನರಕದಲ್ಲಿ ಇರುವವರಾದರೆ ಮತ್ತು ಅವರಿಗೆ ಮೀಸಲಾದ ಭಾಗವು ಬದಲಾಯಿಸದಂತೆ ದೃಢಪಟ್ಟಿದ್ದಾರೆ. ಬುದ್ಧಿವಂತ ಮತ್ತು ಆಲೋಚನೆ ಮಾಡುವ ಜನರು ಕರ್ತನು ಯಾಕೆ ಇವರನ್ನು ಪುನರುತ್ಥಾನ ಗೊಳಿಸುತ್ತಾನೆಂದು ಆಶ್ಚರ್ಯಪಡುತ್ತಾರೆ. ನಂತರದಲ್ಲಿ ಅವರು ಸತ್ತವರು ಜೀವಿಸುವವರೇ ಆಗಿದ್ದರೆ ಅಂಥವರನ್ನು ಸತ್ತವರು ಎಂದು ಯಾಕೆ ಕರೆಯಬೇಕು ಎಂಬುದಾಗಿಯೂ ಆಶ್ಚರ್ಯಪಡುತ್ತಾರೆ. ನಂತರದಲ್ಲಿ ಅವರು ನಮ್ಮ ಕರ್ತನಾಗಲೀ ಅಪೋಸ್ತಲರಾಗಲೀ ಯಾಕೆ ಸತ್ತವರು ಇನ್ನೂ ಜೀವದಿಂದಿದ್ದಾರೆ ಎಂಬುದರ ಬಗ್ಗೆ ಏನನ್ನೂ ಹೇಳಿಲ್ಲವೇಕೆ? ಎಂಬುದಾಗಿಯೂ ಆಶ್ಚರ್ಯಪಡುತ್ತಾರೆ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಅವರು "ಪುನರುತ್ಥಾನವೊಂದೇ ನಿರೀಕ್ಷೆ, ಪುನರುತ್ಥಾನವಿಲ್ಲವಾದರೆ ಎಲ್ಲರೂ ನಾಶವಾಗಿ ಹೋಗುವರು" ಎಂದು ಹೇಳಿದ್ದಾರೆ (1 ಕೊರಿಂಥ 15:13–18 ಓದಿರಿ). ನಂತರದಲ್ಲಿ "ಸಮಾಧಿ ಯಲ್ಲಿರುವವರೆಲ್ಲರೂ ಎದ್ದು ಬರುವರು" (ಯೋಹಾನ 5:28) ಎಂಬ ನಮ್ಮ ಕರ್ತನ ಮಾತುಗಳಲ್ಲಿ ಅರ್ಥವು ಪ್ರಾರಂಭವಾಗುತ್ತದೆ. ಕ್ರಮೇಣವಾಗಿ ಸತ್ತವರು ಬದುಕಿರುವುದಿಲ್ಲ, ಮತ್ತು ಮರಣವು ಜೀವಿಸುವುದರ ವಿರುದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ ಎಂಬುದು ತೋರಿಬರುತ್ತದೆ. ಪರಿಶುದ್ಧ ಗ್ರಂಥಗಳು ಈ ವಿಷಯವಾಗಿ ತಮ್ಮೊಳಗೆ ಸಮರ್ಪಕವಾದ ಸಾಮರಸ್ಯ ಹೊಂದಿದೆ ಎಂಬುದನ್ನು ಬಯಸುವವರು ಇದು ಪೋಪನ ಅಧಿಕಾರದಿಂದ ಪಡಕೊಂಡ ಸಾಮಾನ್ಯ ಸಂಪ್ರದಾಯಕ್ಕೆ ತದ್ವಿರುದ್ಧವಾಗಿದೆ ಎಂದು ಕಂಡುಕೊಳ್ಳುತ್ತಾರೆ.

ತಪ್ಪಿನ ಮೂಲವನ್ನು ಈ ರೀತಿಯಲ್ಲಿ ತೆಗೆದುಹಾಕಲಾಯಿತು. ಅದರ ವಿವಿಧ ಕೊಂಬೆಗಳು ಉದುರುವುದಕ್ಕೆ ಪ್ರಾರಂಭಿಸಿದವು; ಕೇಡುಗರಿಗೆ ಯಾತನೆಯಲ್ಲಿ ನಿರಂತರ ಜೀವನ ಎಂಬುದಕ್ಕೆ ವ್ಯತಿರಿಕ್ತವಾಗಿರುವದೇ ಸತ್ಯವೇದದಲ್ಲಿ ದೇವರ ಯೋಜನೆಯ ಹೇಳಿಕೆ, ಎಂಬುದನ್ನು ಕೂಡಲೇ ಕಂಡುಕೊಳ್ಳಲಾಯಿತು. ಅದೇನೆಂದರೆ, ನಿತ್ಯಜೀವವು ನೀತಿವಂತರಿಗೆ ದೊರೆಯುವ ಬಹುಮಾನವಾಗಿದೆ ಮತ್ತು ಮರಣವು ಜೀವದಿಂದ ಕಡಿದುಹೋಗುವಂತಾದ್ದಾಗಿದ್ದು ಅದು ಇಚ್ಛಾ ಪಾಪಿಗಳಿಗೆ ದೊರೆಯುವ ಶಿಕ್ಷೆಯಾಗಿದೆ.

ನಂತರದಲ್ಲಿ ಆದಾಮನ ಅವಿಧೇಯತೆಯಿಂದ ಮಾನವ ಜನಾಂಗದವರಿಗೆಲ್ಲಾ ಬಂದ ಮರಣ ಶಾಪವೆಂದರೇನು? ಎಂದು ಕಂಡು ಬಂತು. ಎಲ್ಲಾ ಜನಾಂಗದವರೂ ನಾಶವಾಗಿ ಹೋಗುವ ದಂಡನೆಯನ್ನು ಹೊಂದಿದರು. ಆಗ ಸಹ ನಮ್ಮ ಕರ್ತನ ಮರಣದ ಉದ್ದೇಶ ಮತ್ತು ಮೌಲ್ಯಗಳು ಮಾನವ ಜನಾಂಗದ ಮೇಲೆ ಬಂದಿರುವ ದಂಡವನ್ನು ಪಾವತಿಸುವುದಾಗಿದ್ದು ಪುನರುತ್ಥಾನ, ಜೀವದ ಪುನರ್‌ವಶವು ಮತ್ತು ಅದರ ಹಕ್ಕನ್ನು ತೋರಿಸುವಂತೆ ಪರದೆಯು ಮೇಲೇರಲು ಪ್ರಾರಂಭಿಸಿತು. ಆಹಾ! ನಂತರದಲ್ಲಿ ಕಂಡುಬರುವಂತೆ ಈಡುಬಲಿಯ ಅರ್ಥವನ್ನು ಪ್ರಶಂಸಿಸಲು ಪ್ರಾರಂಭವಾಯಿತು. ಪಾಪವನ್ನರಿಯದ ಆತನನ್ನು ಶಾಪಗ್ರಸ್ತನಂತೆ ನಡೆಸಿಕೊಳ್ಳಲಾಯಿತು. ನಮ್ಮ ಪರವಾಗಿ ಉಚಿತವಾಗಿ ಬದಲಿಯಾದಾತನನ್ನು ನಮಗೋಸ್ಕರ ಶಾಪವುಳ್ಳ ವನನ್ನಾಗಿ ಮಾಡಲಾಯಿತು, ಪಾಪಿಯಂತೆ ನಡೆಸಿಕೊಳ್ಳಲಾಯಿತು ಮತ್ತು ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಮರಣ ಹೊಂದಿದನು.

ಈ ರೀತಿಯಲ್ಲಿ, ಅಂತ್ಯದಲ್ಲಿ ನಿರಂತರ ಹೋಮವನ್ನು ತೆಗೆದುಹಾಕಿದ್ದರೊಂದಿಗೆ ಪ್ರಾರಂಭವಾಗಿದ್ದ ತಪ್ಪನ್ನು ಕಲುಷಿತ ಮಾಡುವ ಮಹಾವ್ಯವಸ್ಥೆಯನ್ನು ಮತ್ತು ಅಂತರ್ಜಾಲವನ್ನು ತೆಗೆದುಹಾಕಲಾಯಿತು. ಮತ್ತು ಪವಿತ್ರಸ್ಥಾನವನ್ನು ಬಿಡುಗಡೆಗೊಳಿಸಿ ಶುದ್ಧೀಕರಿಸಲಾಯಿತು. ಯೇಸುವಿನ ನಿರಂತರ ಹೋಮದ ಮೌಲ್ಯವು ನವೀಕರಿಸಿದ ಹೊಸತನದಲ್ಲಿ ಸೊಬಗು ಮತ್ತು ಶಕ್ತಿಯು ಕಂಡು ಬಂತು.

ಪವಿತ್ರಸ್ಥಾನವನ್ನು ಈ ವೈಲಿಗೆಯಿಂದ ಶುದ್ಧೀಕರಿಸಲಾಯಿತು ಎಂದು ನಾವು ಹೇಳುವಾಗ, ಸತ್ಯವೇದದಲ್ಲಿ ಸಭೆಯ ಒಂದು ಭಾಗವು ಅಪರೂಪವಾಗಿ ಸಂಪೂರ್ಣತೆಯ ಪರ ನಿಲ್ಲುವುದಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕಾಗಿದೆ. ಒಂದು ತಂಡ, ಕೆಲವರನ್ನು ಮಲೀನಗೊಳಿಸುವ ತಪ್ಪಿನಿಂದ ತೆಗೆದುಹಾಕಲಾಗಿದೆ; ಈ ಕೆಲವರಿಗೆ ದೇವರು ಪ್ರತಿನಿತ್ಯವೂ ಆತನ ಮಾರ್ಗದರ್ಶನದಲ್ಲಿರುವವರು ಮತ್ತು ಆತನಿಂದ ಕಲಿಯುತ್ತಿರುವವರನ್ನು ಕೂಡಿಸುತ್ತಾ ಇರುತ್ತಾನೆ.

ಏನು ಸಂಭವಿಸಲಿದೆ ಎಂಬ ಆತನ ಲೆಕ್ಕಾಚಾರದಲ್ಲಿ, ಮಿ. ಮಿಲ್ಲರ್‌ರವರು ಸರಿಯಾದುದಕ್ಕೆ ಬಹಳ ದೂರವಾಗಿದ್ದರು, ಪವಿತ್ರಾಲಯದ ಶುದ್ಧೀಕರಣವೆಂದರೆ ಲೋಕವು ಸುಟ್ಟು ಹೋಗಲಿರುವ ಅಕ್ಷರಶಃವಾದವಾದ ಬೆಂಕಿಯ ಕೇಡಿನಿಂದ ಶುದ್ಧೀಕರಿಸುವುದೆಂದು ಭಾವಿಸಿದರು. ಉದ್ಭವಿಸಿದ ಅವರ ಭವಿಷ್ಯವಾಣಿಗಳ ಸೋಲು ಅವರ ಬೋಧನೆಗಳ ಮೂಲಕ ಕರ್ತನು ಪರಲೋಕದಿಂದ ಇಳಿದುಬರುತ್ತಾನೆ ಮತ್ತು “ನಿನ್ನ ರಾಜ್ಯವು ಬರಲಿ” ಎಂಬ ತಮ್ಮ ಪ್ರಾರ್ಥನೆಯು ಈಡೇರುತ್ತದೆ ಎಂದು ಕಲಿತುಕೊಂಡ ಅವರ ಅಧೀನದಲ್ಲಿರುವವರಿಗೆ ದುಃಖದಾಯಕವಾದ ಪರೀಕ್ಷೆಯಾಗಿತ್ತು. ಆದರೆ, ಮದಲಿಂಗನ ವಿಳಂಬಣೆಯಿಂದ ನಿರಾಶರಾಗಿದ್ದರೂ, ಅವರು ಬಹಳವಾಗಿ ಆಶೀರ್ವದಿತರಾಗಿಯೇ ಇದ್ದರು. ಪರಿಶುದ್ಧ ಗ್ರಂಥವನ್ನು ಹುಡುಕುವ ಅವರ ಅನುಭವವು ಮೌಲ್ಯವುಳ್ಳದ್ದಾಗಿತ್ತು. ಮತ್ತು ಅವರು ದೇವರ ವಾಕ್ಯವನ್ನು ಮಾನವರ ಸಂಪ್ರದಾಯದಿಂದ ಮೇಲ್‌ಸ್ಥಾನದಲ್ಲಿಡುವುದನ್ನು ಕಲಿತಿದ್ದರು. ಅವರನ್ನು ಬಿಡುಗಡೆಗೊಳಿಸಿದ ವಿವಿಧ ಪಂಗಡಗಳ ಜನರ ಮನ್ನಣೆ ಮತ್ತು ಗೌರವದ ಗುಲಾಮತನದಿಂದ ಸಾಕಷ್ಟು ಸ್ವತಂತ್ರವಾದರು. ಯಾಕೆಂದರೆ ಕರ್ತನ ಬರೋಣ ಬಗ್ಗೆ ತಮ್ಮ ನಿಶ್ಚಿತ ಅಭಿಪ್ರಾಯದ ವಿಧೇಯತೆಯ ಕಾರಣ ಇವರು ಅವರ ಸಹವಾಸದಿಂದ ದೂರವಾಗಿದ್ದರು. ನಿಶ್ಚಿತಾಭಿಪ್ರಾಯಗಳಿಗೆ ನಿಷ್ಠೆಯಿಂದಿರುವುದು ಸದಾ ಕೆಲವು ಆಶೀರ್ವಾದಗಳನ್ನು ತರುತ್ತವೆ; ಹೇಗೆಂದರೆ, ಪೌಲನು ದಮಸ್ಕಕ್ಕೆ ಹೋಗುವಾಗಲೂ, ಆತನು ಕರ್ತನನ್ನು ಹಾದಿಯಲ್ಲಿ ಸಂಧಿಸಿದಂತೆ ನಾವು ಹಾದಿಯಲ್ಲಿ ಕರ್ತನನ್ನು ಸಂಧಿಸುತ್ತೇವೆ.

ಪರಿಣಾಮವಾಗಿ ಇವರುಗಳಲ್ಲಿ ಕೆಲವರು ಶುದ್ಧೀಕರಣ ಅಥವಾ ಸುಧಾರಣೆಯ ಕಾರ್ಯದಲ್ಲಿ ಯಾವುದೇ ಹಿಂದಿನವರಿಗಿಂತ ಹೆಚ್ಚು ಮುಂದುವರೆದ ನಿಲುವನ್ನು ತೆಗೆದುಕೊಂಡರು ಎಂಬುದು ನಮಗೆ ತೋರಿಬರುತ್ತದೆ. ಮೇಲೆ ತೋರಿಸಿದಂತೆ, 2300 ದಿನಗಳ ಅಂತ್ಯವಾದ 1846ರಲ್ಲಿ ಕ್ರೈಸ್ತರ ಅಸಂಘಟಿತ ಕೇಂದ್ರ ಭಾಗವು ಕಂಡುಬಂದಿತು. ಅವರು ಶಿಷ್ಯರ ಕ್ರೈಸ್ತಸಭಾ ಆಡಳಿತಗಾರಿಕೆಯನ್ನು ನಿರಾಡಂಬರತೆ ಎಂದು ಒಪ್ಪಿಕೊಂಡದ್ದಲ್ಲದೆ, ಅದು ಸತ್ಯವೇದವಲ್ಲದೆ ಬೇರೆಲ್ಲಾ ಪಂಥಗಳನ್ನೂ, ಮತ್ತು ಸೇವಕರಿಂದ ದೊರೆತ ಎಲ್ಲಾ ಬಿರುದುಗಳನ್ನು ನಿರ್ಮೂಲ ಮಾಡಿದರು. ಆದರೆ ಬ್ಯಾಪ್ಟಿಸ್ಟ್‌ರೊಡನೆ ಬಾಹ್ಯರೀತಿಯ ದೀಕ್ಷಾಸ್ನಾನದ ವಿಷಯದಲ್ಲಿ ಮತ್ತು ಲೂಥರನೊಡನೆ ಪೋಪನ ಅಧಿಕಾರವು ಅಧರ್ಮ ಸ್ವರೂಪಿಯದಾಗಿದೆ ಮತ್ತು ಕ್ಷೀಣಿಸುತ್ತಿರುವ ಸಭೆಗಳು ವೇಶ್ಯೆಗಳ ಮತ್ತು ಅಸಹ್ಯತೆಯ ತಾಯಿಯಾಗಿದೆ ಎಂಬುದನ್ನು ಮಾತ್ರ ಒಪ್ಪಿಕೊಂಡರು. ಲೋಕದೊಡನೆ, ಲೋಕದ ಅಲೋಚನೆಗಳೊಂದಿಗೆ ಯಾವುದೇ ಸಂಧಾನವಿಲ್ಲದೆ, ಸಂಬಂಧವಿಲ್ಲದೆ ಪ್ರತ್ಯೇಕವಾಗಿ ನಿಂತುಕೊಳ್ಳುವುದು ಮಹತ್ವವಾದ ದೈವಭಕ್ತಿಯನ್ನೂ, ಸರ್ವವ್ಯಾಪಿಯಾದ ದೇವರೊಡನೆ ಸರಳವಾಗಿ ನಂಬಿಕೆ ಹೊಂದಿಕೊಳ್ಳುವುದು, ಆತನ ಕಟ್ಟಳೆಗಳ ಮೇಲೆ ಬದಲಾಗದ ವಿಶ್ವಾಸವಿಡುವುದನ್ನು ಕಲಿಸಿತು. ಇದರೊಂದಿಗೆ, ಯೇಸುವನ್ನು ಎಲ್ಲರ ಕರ್ತನೆಂದು, ದೈವಿಕ ಸ್ವರೂಪದಲ್ಲಿ ಈಗ ಭಾಗಿಯಾದವನೆಂದು ಮಾನ್ಯ ಮಾಡುವಾಗ ಅವರು ಮತ್ತು ಅಸಮಂಜಸವಾದ ವಿಚಾರಣಾ ಸರಣಿಯಾದ ಯೆಹೋವನು ಆತನ ಸ್ವಂತ ಮಗನು ಮತ್ತು ಯೇಸುವು ಆತನ ಸ್ವಂತ ತಂದೆಯು ಎಂಬ ಪರಿಶುದ್ಧ ಗ್ರಂಥದಲ್ಲವುಗಳ ಬಗ್ಗೆ ಎಚ್ಚರವಹಿಸಿದರು* ಮತ್ತು ಅವರು ನಿತ್ಯಜೀವ ಮತ್ತು ಅಮರತ್ವ ಇವುಗಳು ಪ್ರಸ್ತುತ ಅನುಭೋಗಗಳಲ್ಲ; ಆದರೆ ಅವುಗಳನ್ನು ಪುನರುತ್ಥಾನದಲ್ಲಿ ದೇವರ ಬಹುಮಾನವಾಗಿದೆ ಎಂಬುದನ್ನು ಅವರು ಕಾಣತೊಡಗಿದರು.

* ಈ ಸಂಗತಿಗಳನ್ನು SCRIPTURE STUDIES ಸರಣಿಯ ಸಂಪುಟ Vರಲ್ಲಿ ಸಂಪೂರ್ಣವಾಗಿ ಚರ್ಚಿಸಲಾಗಿದೆ. ಅವುಗಳ ಮೇಲೆ ಆತುಕೊಂಡ ಎಲ್ಲಾ ಪರಿಶುದ್ಧ ಗ್ರಂಥಗಳನ್ನೂ ಪೂರ್ಣವಾಗಿ ಪರೀಕ್ಷಿಸಲಾಗಿದೆ ಮತ್ತು ಅವುಗಳು ನಿರಪೇಕ್ಷವಾಗಿ ಸಾಮರಸ್ಯದಲ್ಲಿರುವುದು ಕಂಡು ಬಂದಿದೆ

ಇನ್ನು ಮುಂದೆ ಎಂದಿಗೂ ಆತನ ಪವಿತ್ರಾಲಯುವನ್ನು ಶುದ್ಧೀಕರಿಸುವ ಒಂದು ವರ್ಗವಿರಬೇಕೆಂದು ಮತ್ತು ಬೇರೆ ಬೇರೆ ಪಂಗಡಗಳಿಂದ ಪ್ರತ್ಯೇಕವಾಗಿರಬೇಕೆಂತಲೂ ದೇವರು ತಾನೇ ವ್ಯವಸ್ಥೆ ಮಾಡುವನೋ ಎಂಬಂತೆ ಈ 1846ರ ವರ್ಷದಲ್ಲಿ ಪ್ರೊತಸ್ತಾಂತ ಪಂಥವು 'The Evenagelical Alliance' ಎಂಬುದನ್ನು ಕಂಡಿತು. ಈ ಸಂಸ್ಥೆಯು ಶುದ್ಧೀಕರಿಸಿದ ಪವಿತ್ರಾಲಯದ ಬಗ್ಗೆ ನೂತನ ದೃಷ್ಟಿಕೋನವನ್ನು ಮನಸ್ಸಿನಲ್ಲಿ ತುಂಬಿಸಿಕೊಂಡು ಸ್ಪಷ್ಟವಾಗಿ ಮಾನವ ಅಮರತ್ವದ ಬಗ್ಗೆ ತನ್ನ ನಂಬಿಕೆಯನ್ನು ದೃಢಪಡಿಸಿತು. ಮತ್ತು ಅದನ್ನು ವಿಶ್ವಾಸ ಸೂತ್ರದ ಒಂಬತ್ತನೇ ವಿವರ ಪಟ್ಟಿಯಲ್ಲಿ ಸೇರಿಸಿತು. ಹೀಗಾಗಿ ಅದು ಪ್ರತ್ಯೇಕವಾಯಿತು, ಅಂದಿನಿಂದ ಅದು ತನ್ನನ್ನು ಕರ್ತನ ಶುದ್ಧೀಕರಿಸಿದ ಪವಿತ್ರಾಲಯ, ಸತ್ಯವಾದ ಪವಿತ್ರಾಲಯ ಎಂಬುದಾಗಿ ಕ್ರೈಸ್ತರ ದೇವರ ಮಕ್ಕಳ ಸಮೂಹ ಪ್ರತ್ಯೇಕಿಸಿಕೊಂಡಿತು. ಮತ್ತೂ ಈ ಶುದ್ಧೀಕರಿಸಿದ ಪವಿತ್ರಾಲಯ ವರ್ಗದೊಂದಿಗೆ ಇತರೆ ಸಾಧು ಸ್ವಭಾವದ ಮತ್ತು ಪ್ರಾಮಾಣಿಕರಾದ ದೇವರ ಮಕ್ಕಳನ್ನು ಅಂದಿನಿಂದ ಪ್ರತಿದಿನ ಸೇರಿಸಿಕೊಳ್ಳಲಾಯಿತು. ಅದೇ ವೇಳೆ ಅವರು ತಮ್ಮ ಸೌಮ್ಯತೆ ಮತ್ತು ಸತ್ಯದ ಮೇಲಿನ ಪ್ರೀತಿಯನ್ನು ಕಳೆದುಕೊಳ್ಳದಂತೆ ಮಾಡಲಾಯಿತು. ಒಂದು ಶುದ್ಧೀಕರಿಸಿದ ಪವಿತ್ರಾಲಯವಾಗಿ ತಮ್ಮ ನಿರ್ದಿಷ್ಟ ಮಾನವನ್ನು ಸಂಘಟಿತ ವಿರೋಧಿಗಳ ಮತ್ತು ಹೆಚ್ಚು ಸಂಖ್ಯೆಯುಳ್ಳವರ ಎದುರು ಕಾಪಾಡಿಕೊಳ್ಳುವುದು, ಧೈರ್ಯ ಮತ್ತು ವಿಶ್ವಾಸದ ಕಠಿಣ ಪರೀಕ್ಷೆಯಾಯಿತು. ಇದನ್ನು ಕೆಲವರು ಮಾತ್ರವೇ ಸಹಿಸಿಕೊಳ್ಳಬಲ್ಲರು; ಹೆಚ್ಚಿನವರು ತಮ್ಮ ಹಿಂದಿನವರ ಪದ್ಧತಿಗಳನ್ನು ಅನುಸರಿಸುವರು ಮತ್ತು ತಾವು ಲೋಕದ ದೃಷ್ಟಿಯಲ್ಲಿ ಗೌರವಾರ್ಹವಾಗಿರುವಂತೆ ಪ್ರಯತ್ನಿಸುವರು, ಸ್ವಲ್ಪ ಮಟ್ಟಿಗೆ ಬಹಳವಾಗಿ ಕಂಡು ಬಂದು ಕಡಿಮೆ ದ್ವೇಷವನ್ನು ಬಯಸುವವರಾಗಿ ಇವುಗಳಲ್ಲಿ ಕೆಲವು ಮತ್ತೊಂದು ವ್ಯವಸ್ಥೆಯನ್ನು ಸಂಘಟಿಸಿಕೊಂಡವು, ಸೂತ್ರವೊಂದನ್ನೂ ರಚಿಸಿಕೊಂಡವು ಮತ್ತು 'Second Adventists' ಎಂಬ ಮತ್ತೊಂದು ಪಂಥೀಯ ಹೆಸರನ್ನು ಆಯ್ದುಕೊಂಡರು ಮತ್ತು ತಾವು ಏನನ್ನು ಕಲಿತಿದ್ದೇವೆಯೋ ಅದುವೇ ಕಲಿಯಬೇಕಾದವುಗಳು ಎಂಬ ನಂಬಿಕೆಗೆ ತಮ್ಮನ್ನು ನೆಲೆಗೊಳಿಸಿಕೊಂಡರು. ಅಂದಿನಿಂದ ಅವರು ಯಾವ ಪ್ರಗತಿಯನ್ನೂ ಮಾಡಲಿಲ್ಲ; ಇತರರಂತೆಯೇ ಪರಿಪೂರ್ಣ ದಿನದತ್ತ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನ ಮಾರ್ಗವನ್ನು ಅನುಸರಿಸಲು ವಿಫಲರಾಗಿದ್ದಾರೆ. ಅವರಲ್ಲಿ ಅನೇಕರು ಮೂರ್ಖತನದ ತಪ್ಪುಗಳಲ್ಲಿ ಬಿದ್ದುಹೋದರು.

ಅನೇಕರು ಮೊದಲಿಗೆ ಶುದ್ಧೀಕರಿಸಿದ ಪವಿತ್ರಾಲಯವನ್ನು ಪ್ರತಿನಿಧಿಸಿದ್ದವರು ಪುನಃ ದಾಸತ್ವದ ನೊಗದಲ್ಲಿ ಸಿಕ್ಕಿಹಾಕಿಕೊಂಡರು, ಯಾರು ತಮ್ಮನ್ನು ಸ್ವತಂತ್ರರನ್ನಾಗಿರಿಸಿಕೊಂಡು ಕರ್ತನನ್ನು ತಿಳಿದು ಕೊಳ್ಳುವಂತೆ ಅನುಸರಿಸುತ್ತಾ ಇದ್ದರೋ ಅಂಥವರು ಇನ್ನೂ ಆತನ ಪವಿತ್ರಾಲಯವನ್ನು ಪ್ರತಿನಿಧಿಸುತ್ತಿದ್ದಾರೆ ಮತ್ತು ಆತನ ನಾಯಕತ್ವವನ್ನು ತಮ್ಮದಾಗಿಸಿಕೊಂಡು ಆಶೀರ್ವಾದ ಹೊಂದುತ್ತಾ ಇದ್ದಾರೆ.

1846ರಲ್ಲಿ ಹೊಲಸಾದ ಮತ್ತು ಮಲೀನಗೊಳಿಸುವ ಅಸಹ್ಯಕರ ಸಂಗತಿಗಳನ್ನು ಸಂಪೂರ್ಣವಾಗಿ ತೆಗೆದು ಬಿಡುವುದಾದರೆ, ಆ ಸಮಯದಿಂದ ಎಲ್ಲವೂ ಕ್ರಮಬದ್ಧವಾಗಿ ದೇವರ ಮಹಿಮೆಗಾಗಿ ಉಳುಕೊಳ್ಳುತ್ತವೆ ಮತ್ತು ದೇವರ ಭವ್ಯವಾದ ಯೋಜನೆಯನ್ನು ಅಭಿವೃದ್ಧಿಪಡುವುದಕ್ಕಾಗಿ ತೆರೆದುಕೊಳ್ಳುತ್ತವೆ ಮತ್ತು ಅಸತ್ಯಗಳು ತೆಗೆಯಲ್ಪಟ್ಟ ಜಾಗಗಳನ್ನು ಸತ್ಯವು ಪುನಃ ಆಕ್ರಮಿಸಿಕೊಳ್ಳುತ್ತದೆ.

ಸತ್ಯವನ್ನು ಆರಂಭಿಸಿ ಮತ್ತು ಅದನ್ನು ಪರೀಕ್ಷಿಸಿ ಅದರ ಸೌಂದರ್ಯವನ್ನು ಮೆಚ್ಚಿಕೊಳ್ಳುವ ಈ ಕಾರ್ಯವು ಈಗ ಯುಕ್ತವಾಗಿದೆ ಮತ್ತು ನೆರವೇರುವುದಾಗಿದೆ. ಇತರರೊಂದಿಗೆ ಕರ್ತನ ಮನೆಗೆ ಬಂಗಾರದ ಪಾತ್ರೆಗಳನ್ನು (ಅಮೂಲ್ಯವಾದ ಸತ್ಯಗಳನ್ನು) ಸಾಂಕೇತಿಕ ಸೆರೆಯಿಂದ ಮಹಾ ಬಾಬೇಲಿನಿಂದ (ಎಜ್ರ. 1:7–11; 5:14; 6:5) ತರುವುದರಲ್ಲಿ ಮತ್ತು ಅದನ್ನು ಪವಿತ್ರಾಲಯದ ಮುಂಚಿನ ಸ್ಥಳದಲ್ಲಿಯೇ ಇಡುವ ಕಾರ್ಯದಲ್ಲಿ ನಿರತರಾಗುವ ಭಾಗ್ಯಕ್ಕಾಗಿ ನಾವು ದೇವರನ್ನು ಸ್ತುತಿಸುತ್ತೇವೆ. ಈ ಮಹಾ ಕಾರ್ಯದಲ್ಲಿ ನಾವು ಎಲ್ಲಾ ಸಹ–ಕಾರ್ಯಕರ್ತರಿಗೂ (ಸಹೋದ್ಯೋಗಿಗಳು) ಮತ್ತು ಅಭಿಷಿಕ್ತ ದೇಹದ ಸದಸ್ಯರುಗಳಿಗೂ ಸಹೋದರ ಅಭಿನಂದನೆಗಳನ್ನು ಅರ್ಪಿಸುತ್ತೇವೆ, ಅವರ ಕರ್ತನು ಬರುವಾಗ ಮನೆವಾರ್ತೆಯವರಿಗೆ ಆಹಾರವನ್ನು ತಕ್ಕಕಾಲದಲ್ಲಿ ಕೊಡುವಂತೆ ಕಂಡುಕೊಳ್ಳುವ ಸೇವಕರು ಧನ್ಯರು.

* * * * * * *